10. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

ವಿಷಯ:- ರಾಜ್ಯದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ನಷ್ಟವುಂಟಾಗುತ್ತಿದ್ದು, ಸದರಿ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಈ ಮರಳಿನದು ಮುಗಿಯದ ಕಥೆಯಾಗಿದೆ. ಕಳೆದ ಮೂರ್ನಾಲ್ಕು ಅಧಿವೇಶನಗಳಲ್ಲಿ ಸಹಿತ ಈ ಅಕ್ರಮ ಮರಳು ಗಣಿಗಾರಿಕೆ ಬಗ್ಗೆ ನಾವೆಲ್ಲರೂ ಸದಸ್ಯರು, ಬಹುಶಃ ಈ ಕಡೆ ಕುಳಿತವರು, ಅಲ್ಲಿ ಕುಳಿತವರು ಇರಬಹುದು, ಪ್ರತಿ ವಿಧಾನಸಭೆ ಅಧಿವೇಶನದಲ್ಲಿ ನಾವು ಮಾತನಾಡುತ್ತೇವೆ. ಮಹದೇವಪ್ಪನವರು ಲೋಕೋಪಯೋಗಿ ಇಲಾಖಾ ಸಚಿವರು, ಈಗ ಅದಕ್ಕೆಲ್ಲಾ co-ordinate ಮಾಡುವವರು, ಅದಕ್ಕೆಲ್ಲಾ incharge ನೀವೇ. ಆ ಇಲಾಖೆಯ ಉಸ್ತುವಾರಿ ನೀವೇ.

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):- P.W.D. ಯವರು, tender ಮಾಡಿ yard ಮಾಡಿ consumer ಗೆ ಕೊಡುವುದಷ್ಟೇ. Entire court ಕೊಡುವವರು ನಾವಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಜವಾಬ್ದಾರಿ ನಿಮ್ಮದೇ ಇದೆ, ಇದಕ್ಕೆ ಉತ್ತರವನ್ನು ನೀವೇ ಕೊಡುತ್ತಿದ್ದೀರಿ.

ಡಾ: ಹೆಚ್.ಸಿ. ಮಹದೇವಪ್ಪ:- No. Tender points ಅನ್ನು ಜಿಲ್ಲಾಧಿಕಾರಿಗಳು ಗುರುತು ಮಾಡುತ್ತಾರೆ. Tender ಮಾಡಿ extract ಮಾಡುವುದನ್ನು stock yard ಗೆ . . That is the function. You should not be under wrong impression.

ಶ್ರೀ ಜಗದೀಶ್ ಶೆಟ್ಟರ್:- ನೋಡಿ, ಹಾಗಾದರೆ ಈ ಮರಳಿನ ಬಗ್ಗೆ ನಿಯಂತ್ರಣ ಮಾಡುವುದಾಗಲಿ, supply ಮಾಡುವುದಾಗಲಿ, block ಗಳನ್ನು create ಮಾಡುವುದಾಗಲಿ, ಇದಕ್ಕೆಲ್ಲಾ ಯಾರು ಜವಾಬ್ದಾರಿ?

ಡಾ: ಹೆಚ್.ಸಿ. ಮಹದೇವಪ್ಪ:- ಅವರೆಲ್ಲಾ create ಮಾಡುವುದಿಲ್ಲ. ಜಿಲ್ಲಾಧಿಕಾರಿಗಳು identify ಮಾಡಿದಂಥ . . .

ಶ್ರೀ ಜಗದೀಶ್ ಶೆಟ್ಟರ್:- ಅದೆಲ್ಲಾ ನನಗೆ ಗೊತ್ತಿದೆ, ಒಂದು ನಿಮಿಷ ನಾನು brief ಆಗಿ ಹೇಳುತ್ತೇನೆ. ಆಮೇಲೆ ನೀವು ಹೇಳಿ.

ಡಾ: ಹೆಚ್.ಸಿ. ಮಹದೇವಪ್ಪ:- ಇದೆಲ್ಲಾ ನೀವು, ಅಶೋಕ್‌ರವರು ಇದ್ದರು, ಆಗ ಅವರು ತಮಿಳುನಾಡಿಗೆ ಹೋಗಿ ಬಂದು ಮಾಡಿದಂಥ guidelines ಅದು. Only the role of Department should be proper. .

ಶ್ರೀ ಆರ್. ಅಶೋಕ್:- ಅಧ್ಯಕ್ಷರೆ, ನಾವು ಆಗ ಒಂದು ಸಮಿತಿ ಮಾಡಿ ಅದಕ್ಕೆ ಒಂದು ಅಧಿಕಾರವನ್ನು ಕೊಟ್ಟೆವು. ಇಡೀ ರಾಜ್ಯದಲ್ಲಿ ಅವತ್ತು 8.00 ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು. ಈ ಸಮಿತಿ ಮಾಡುವುದರಿಂದ, ರಾಜ್ಯಕ್ಕೆ ಸುಮಾರು 200 ಕೋಟಿ ರೂಪಾಯಿಗಳ ಆದಾಯ ಬರುತ್ತದೆ ಎನ್ನುವ ದೃಷ್ಟಿಯಿಂದ ಮಾಡಿದೆವು. ತಮಿಳುನಾಡಿನಲ್ಲಿ ಆ ರೀತಿ ಮಾಡುತ್ತಿದ್ದಾರೆ. ತಮಿಳುನಾಡಿನಲ್ಲಿ 300 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಆದಾಯ ಬರುತ್ತದೆ. ನಮ್ಮಲ್ಲಿಯೂ ಬರಬೇಕೆಂದು ಆ ರೀತಿ ಮಾಡಿದೆವು.

ಡಾ: ಹೆಚ್.ಸಿ. ಮಹದೇವಪ್ಪ:- ನೀವು ತಮಿಳುನಾಡಿಗೆ ಹೋಗಿ ನೋಡಿಕೊಂಡು ಬಂದ ಮೇಲೆ ನೀವೇ ಅದನ್ನು ಮಾಡಿರುವುದು.

ಶ್ರೀ ಆರ್. ಅಶೋಕ್:- ಆದರೆ ಅದು ಜಾರಿಗೆ ಬರಲಿಲ್ಲ. ಇವತ್ತು ಯಾರೆಂದರೆ ಅವರು ಮರಳು ಎತ್ತುತ್ತಿದ್ದಾರೆ. ಇದು ಬಹಳ important.

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಮಾತನಾಡಲಿ ಬಿಡಿ.

ಶ್ರೀ ಆರ್. ಅಶೋಕ್:- ಸರ್, ಅವರೇ ಮಾತನಾಡುತ್ತಾರೆ. ಬೆಂಗಳೂರಿನ ವಿಷಯ ಬಹಳ important ನಾನು ಮಾತನಾಡಬೇಕಲ್ಲವೇ? ಆಮೇಲೆ ಮಾತನಾಡುವ ಬದಲು ಈಗಲೇ ಮಾತನಾಡಿಬಿಡುತ್ತೇನೆ.

ಅಧ್ಯಕ್ಷರು:- ಆಯಿತು, ಹೇಳಿ.

ಶ್ರೀ ಆರ್. ಅಶೋಕ್:- ಸರ್, ಬಹಳ ಮುಖ್ಯವಾಗಿ ಒಂದು ಕಡೆ ಮರಳಿನ ದಂಧೆ, ಎರಡನೆಯದಾಗಿ ಮರಳಿನ ದಂಧೆಯೊಳಗೆ filter ಮರಳು. ಬೆಂಗಳೂರಿಗೆ ಬಹಳಷ್ಟು ಪ್ರತಿನಿತ್ಯ ಈ filter ಮರಳು ನೂರಾರು load ಬರುತ್ತಿದೆ. ಮುಖ್ಯವಾಗಿ ನಮಗೆ ಭಯವಿರುವುದೇನೆಂದರೆ, ಮೊನ್ನೆ ಸಹ flat ಬಿದ್ದು ಜನರಿಗೆ ಏಟಾಗಿ ಸತ್ತಿರುವುದು ಗೊತ್ತಿದೆ. ಈ ತರಹ filter ಮರಳು ಬಂದು, ಯಾವುದಾದರೂ flat ಕುಸಿದು ಬಿದ್ದರೆ ಸಾವಿರಾರು ಜನ ಸತ್ತು ಹೋಗುತ್ತಾರೆ.

ಶ್ರೀ ಕೆ. ಶಿವಮೂರ್ತಿ:- ಇದರಲ್ಲಿ ಅಶೋಕರವರ ಹೆಸರೇ ಇಲ್ಲ.

ಶ್ರೀ ಆರ್. ಅಶೋಕ್:- ನನಗೆ ಮಾತನಾಡಲಿಕ್ಕೆ ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆ.

ಶ್ರೀ ಕೆ. ಶಿವಮೂರ್ತಿ:- Rules ಪ್ರಕಾರ ಯಾರು sign ಹಾಕಿರುತ್ತಾರೆ, ಅವರು ಮಾತ್ರ ಮಾತನಾಡಬೇಕು.

ಶ್ರೀ ಆರ್. ಅಶೋಕ್:- ಶಿವಮೂರ್ತಿಯವರು ಇಡೀ ಸರ್ಕಾರದ ಪರವಾಗಿ GPA ತೆಗೆದುಕೊಂಡು ಮಾತನಾಡುತ್ತೀರಿ. ಮಂತ್ರಿಗಳ ಉತ್ತರ ನೀವೇ ಕೊಡುತ್ತೀರಿ, C.M. ಉತ್ತರ ನೀವೇ ಕೊಡುತ್ತೀರಿ. ಅದಕ್ಕೆ ಯಾವ rules ಇದೆ? ನೀವು ಯಾವ rules book ನಲ್ಲಿ ಮಾತನಾಡುತ್ತೀರೋ ನಾನು ಅದೇ rules book ನಲ್ಲಿ ಮಾತನಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ:- ಯಾರು sign ಮಾಡಿರುತ್ತಾರೋ ಅವರು ಮಾತನಾಡಬೇಕು. ಇದರಲ್ಲಿ ತಮ್ಮ ಹೆಸರು ಇಲ್ಲ, ತಾವು ಇದೆ ಎಂದು ಮಾತನಾಡುತ್ತಿದ್ದೀರಿ.

ಶ್ರೀ ಆರ್. ಅಶೋಕ್:- ಇದು ನಿಯಮ 69 ರಡಿ ನಡೆಯುತ್ತಿರುವ ಚರ್ಚೆಯಾಗಿದೆ. Convert ಮಾಡಿದ್ದಾರೆ.

ಶ್ರೀ ಕೆ. ಶಿವಮೂರ್ತಿ:- ಅದನ್ನೇ ನಾನು ಹೇಳುತ್ತಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಿಯಮ 69 ರಲ್ಲಿ ಎಲ್ಲರೂ ಮಾತನಾಡಬಹುದು ಬಿಡಿ.

ಶ್ರೀ ಆರ್. ಅಶೋಕ್:- ನಿಯಮ 69 ರಲ್ಲಿ ನೀವೂ ಸಹ ಮಾತನಾಡಬಹುದು. ನಿಮಗೆ ಮಾತನಾಡಲಿಕ್ಕೆ ಇಚ್ಛೆ ಇಲ್ಲವೆಂದರೆ ಮಾತನಾಡಬೇಡಿ. ಮಹದೇವಪ್ಪನವರೇ, ಇದು ಬಹಳ important ಈ filter ಮರಳು ದಂಧೆ ಏನಾಗಿದೆ ಎಂದರೆ ಇದು easy. ಎಲ್ಲೆಲ್ಲಿ ಸರ್ಕಾರಿ ಜಮೀನುಗಳಿವೆ, forest area ಇವೆ ಅಲ್ಲಿ ಮಾಡುತ್ತಿದ್ದಾರೆ. ಆನೇಕಲ್ ಹತ್ತಿರ forest area ಇದೆ, ನಾನೇ ನೋಡಿದ್ದೇನೆ. ಅಲ್ಲಿ ಸುಮಾರು 40-50 ಲಾರಿಗಳು, J.C.B. ಬಳಸಿ, ಆ ನೀರನ್ನು ತೆಗೆದುಕೊಂಡು ಬಂದು ಮರಳನ್ನು ಬೇರೆ ಮಾಡಿ, ಮಣ್ಣೆಲ್ಲಾ ಕಾಲುವೆಗೆ ಬಿಟ್ಟು ಬಿಡುತ್ತಾರೆ. ಏನಾದರೂ ಅಲ್ಲಿ ಸ್ವಲ್ಪ ಮಳೆ ಬಂದು ದನ ಕರು ಹೋದರೆ, ಅದರಲ್ಲಿ ಕಾಲುಗಳು ಸಿಲುಕಿಕೊಂಡು, ಹೊರಗೆ ಬರಲಾರದೆ ಅಲ್ಲೇ ಸತ್ತು ಹೋಗಿ ಬಿಡುತ್ತವೆ. ಮಕ್ಕಳಿಗೂ ಆ ರೀತಿ ಘಟನೆ ಆಗಿರುವುದು ನಾವು ಮಾಧ್ಯಮದಲ್ಲಿ ನೋಡಿದ್ದೇವೆ. ಬೆಂಗಳೂರು ಇರಬಹುದು, ಎಲ್ಲಿಯೇ ಕಟ್ಟಡಗಳನ್ನು ಕಟ್ಟುವಂಥದ್ದಿರಬಹುದು, ಇದರಿಂದ ಮುಂದಕ್ಕೆ ದೊಡ್ಡ ಅನಾಹುತಗಳು ಕಾದಿವೆ. ಆದ್ದರಿಂದ ಈ filter ಮರಳು ಮಾಡುವಂಥ ದಂಧೆ ಏನಿದೆ, ಇವರು ಸಣ್ಣ ಜನರು ಅಲ್ಲ, ದೊಡ್ಡ ದೊಡ್ಡ ಜನರು. ಇವರು ಬಡವರೇನೂ ಅಲ್ಲ. 40-50 ಲಾರಿಗಳನ್ನು ಇಟ್ಟುಕೊಂಡಿದ್ದಾರೆಂದರೆ ದೊಡ್ಡ ದೊಡ್ಡ ದಂಧೆ ಮಾಡುವವರು. ಇವರಿಗೆ ಖರ್ಚು ಬೀಳುವುದು 5,000-00 ರೂಪಾಯಿಗಳು, ಆದರೆ ಇವರು 40,000-00 ರೂಪಾಯಿಗಳಿಗೆ ಮಾರುತ್ತಾರೆ. ಇವರಿಗೆ 35,000/- ರೂಪಾಯಿಗಳ ಲಾಭ ಈ ದಂಧೆಯಲ್ಲಿ ಸಿಗುತ್ತದೆ. ಇಂಥಾದ್ದನ್ನು ಯಾರು ಬಿಡುತ್ತಾರೆ? ಅದಕ್ಕೆ ನಾನು ಹೇಳುವುದೇನೆಂದರೆ, ಇವರ ಮೇಲೆ ಕಠಿಣವಾಗಿ

ಕ್ರಮ ಕೈಗೊಳ್ಳಬೇಕು. ಅಲ್ಲೇ ಸುಟ್ಟುಹಾಕಿಬಿಡಿ, ಸಾವಿರಾರು ಜನ ಸಾಯುವ ಬದಲು ಆ ಲಾರಿಗಳು, J.C.B. ಗಳು ಎಲ್ಲೆಲ್ಲಿ seize ಮಾಡುತ್ತಾರೋ ಅಲ್ಲೇ ಅವನ್ನು ಸುಟ್ಟು ಹಾಕುವಂಥ ವ್ಯವಸ್ಥೆ ಮಾಡಬೇಕು. ನೀವು seize ಮಾಡುತ್ತೀರಿ, ಆದರೆ ಮಾರನೆ ದಿನ same ಲಾರಿ, same J.C.B. ಅದೇ ಸ್ಥಳದಲ್ಲಿ ನಿಂತಿರುತ್ತದೆ. ಒಬ್ಬ lady ಅಧಿಕಾರಿ ಇದ್ದಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ರಾತ್ರಿ ಸುಮಾರು 1.00 ಗಂಟೆಯಲ್ಲಿ ಹೋಗಿ, ಆ ಸ್ಥಳದಲ್ಲೇ ಗಾಡಿ seize ಮಾಡಿದ್ದಾರೆ. ನನಗೆ ಅವರ ಹೆಸರು ಗೊತ್ತಿಲ್ಲ. ಅವರ ಧೈರ್ಯವನ್ನು ಮೆಚ್ಚಬೇಕು. ಅಲ್ಲಿನ ಜನ ನನಗೆ ಹೇಳಿದರು.

ಶ್ರೀ ನಾರಾಯಣ ಗೌಡ:– ಅವರು ಮಂಡ್ಯದವರೇ, ಮರಳು ದಂಧೆಯವರು ಅವರನ್ನು ಒಂದು ಸಾರಿ ಜೀಪ್‌ನಲ್ಲಿ accident ಮಾಡಲಿಕ್ಕೆ ಪ್ರಯತ್ನಪಟ್ಟಿದ್ದಾರೆ.

ಶ್ರೀ ಆರ್. ಅಶೋಕ್:– ಆದ್ದರಿಂದ ಇವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಬೇಕು. ಏಕೆಂದರೆ ಬೇರೆ ಜನರು ಸಾಯುವುದನ್ನು ತಪ್ಪಿಸಬೇಕಾದರೆ ನಾವು ಇದನ್ನು ಮಾಡಲೇಬೇಕಾಗುತ್ತದೆ. ಆದ್ದರಿಂದ ಈ ತರಹದ ಮರಳು ದಂಧೆ ಮಾಡುವವರ ಮೇಲೆ ಸರ್ಕಾರ ಎಷ್ಟು ಕಠಿಣವಾಗಿ ಸಾಧ್ಯವಾಗುತ್ತದೋ ಅಷ್ಟು ಕಠಿಣವಾಗಿ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಕಳೆದ 2–3 ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಇದನ್ನು ನಿಯಂತ್ರಣಕ್ಕೆ ತನ್ನಿ ಎಂದು ಹೇಳಿದ್ದೇವೆ. ನಿಯಂತ್ರಣ ಯಾವುದೂ ಆಗಿಲ್ಲ. ಅಂದಾದುಂದಿಯಾಗಿ ಇವತ್ತು open ಆಗಿ ಎಲ್ಲಾ ಕಡೆ ಅಕ್ರಮ ಮರಳು ಗಣಿಕಾರಿಕೆ ನಡೆಯುತ್ತಿದೆ, ಲೋಡ್‌ಗಟ್ಟಲೆ ಬೇರೆ ಬೇರೆ ಕಡೆಗಳಲ್ಲಿ ಅಂದರೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗುತ್ತದೆ. Last time ಕೂಡ ಇಲ್ಲಿ ಪ್ರಸ್ತಾಪವಾಗಿದೆ, ಕೇರಳ ರಾಜ್ಯಕ್ಕೆ ಮರಳು ಹೋಗುತ್ತದೆ, ಬೇರೆ ಅಕ್ಕಪಕ್ಕದ ರಾಜ್ಯಗಳಿಗೆ ಮರಳು ಹೋಗುತ್ತದೆ, ಮಹಾರಾಷ್ಟ್ರಕ್ಕೆ ಮರಳು ಹೋಗುತ್ತದೆ. ಇದು ಹಾಗೆಯೇ ನಡೆಯುತ್ತಿದೆ. ಇನ್ನೊಂದು ಮಾನ್ಯ ಅಧ್ಯಕ್ಷರೆ,

ಇವತ್ತು cost ಎಲ್ಲಿಯವರೆಗೆ ಹೋಗಿದೆ ಎಂದರೆ ಒಂದೊಂದು ಕಡೆ, ಒಂದೊಂದು ಲೋಡ್‌ಗೆ ₹ 25 ಸಾವಿರ ಇದೆ, ಕೆಲವು ಕಡೆಗಳಲ್ಲಿ ₹ 40 ಸಾವಿರ ಇದೆ. ಬೆಂಗಳೂರಿನಲ್ಲಿ ಒಂದು ಲಕ್ಷ ರೂಪಾಯಿಗಳವರೆಗೆ ಇದೆ. ಇದು ನಡೆಯುತ್ತಿದೆ. ಇತ್ತೀಚೆಗೆ ಒಂದು ತಿಂಗಳಿನಿಂದ ಪತ್ರಿಕೆಗಳಲ್ಲಿ serial ಆಗಿ articles ಬಂದಿರುವುದನ್ನು ನೀವೆಲ್ಲಾ ನೋಡುತ್ತಿದ್ದೀರಿ. ಬೇರೆ ಬೇರೆ ಪತ್ರಿಕೆಗಳು ಅಂದರೆ, ಪ್ರಜಾವಾಣಿ ಪತ್ರಿಕೆ, ಉದಯವಾಣಿ ಪತ್ರಿಕೆ ಇರಬಹುದು, ಇವುಗಳಲ್ಲಿ ಬಂದಿದೆ. ಕನ್ನಡ ಪ್ರಭದಲ್ಲಿಯಂತೂ daily articles ಬರುತ್ತಿವೆ. ಪ್ರತಿ ದಿವಸ articles ಬರುತ್ತಿವೆ. ಪ್ರತಿಯೊಂದು ಜಿಲ್ಲೆಯ ರಿಪೋರ್ಟ್ ಅನ್ನು ತೆಗೆದುಕೊಂಡಿದ್ದಾರೆ. ಇವತ್ತು ಬಹುಶಃ ಯಾವುದೇ ಅಧಿಕಾರಿಗಳಾಗಲಿ, ಗಣಿ ಇಲಾಖೆಯಿರಬಹುದು ಅಥವಾ ನಿಮ್ಮ ಇಲಾಖೆಯವರಿರಬಹುದು, ಅವರು ರಿಪೋರ್ಟ್ ತೆಗೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ, ಈ ಕನ್ನಡಪ್ರಭದಲ್ಲಿ daily ಬಂದಿರುವಂತಹದ್ದನ್ನು ನೀವು ನೋಡಿಬಿಟ್ಟರೆ, ಬಹುಶಃ ಅದೇ ಒಂದನ್ನು ನೀವು ಅಧ್ಯಯನ ಮಾಡಬಹುದು. ಆ ಒಂದು feedback ಅನ್ನು ತೆಗೆದುಕೊಂಡು ಸಾಕಷ್ಟು ನೀವು ಇದರ ಮೇಲೆ action ತೆಗೆದುಕೊಳ್ಳಬಹುದು. ಈಗ ನೋಡಿ. ಮಡಿಕೇರಿಯಲ್ಲಿ ನೋಡಿ. 'ಕಾವೇರಿ ಗರ್ಭ ಮಸುಕಾಗಿಸಿದ ಉಸುಕು', 'ಉತ್ಕೃಷ್ಟ ಮರಳಿಗಾಗಿ ತುಂಗಭದ್ರೆಗೆ ಲಗ್ಗೆ', 'ಮಧ್ಯಕರ್ನಾಟಕದ ಜೀವ ನದಿ ಜಲಚರಕ್ಕೆ ಸಂಚಕಾರ', 'ಪ್ರಭಾವಿಗಳ ಹಿಡಿತದಲ್ಲಿ ಮರಳು ದಂಧೆ', ಈ ರೀತಿಯಲ್ಲಿ ದಾವಣಗೆರೆಯ ರಿಪೋರ್ಟ್‌ಯಿದೆ. ಪ್ರತಿಯೊಂದು ಜಿಲ್ಲೆಯದು ಇದೆ. ಚಿತ್ರದುರ್ಗದಲ್ಲಿ 'ಹಳ್ಳಿಗರು ಜೊತೆಗೂಡಿದ್ದರಿಂದ ಕಾಳದಂಧೆ ನಿರಾಳ' ಮತ್ತೆ ತುಮಕೂರಿನದು ಇದೆ. 'ಮರಳುಗಾರಿಕೆಯಿಂದ ನದಿಯೇ ಬತ್ತಿತು'. ಮತ್ತೊಂದರಲ್ಲಿ ಶಿವಮೊಗ್ಗದು ಇದೆ. 'ಲಾರಿ ಲಾಬಿಗೆ ಗ್ರಾಹಕರು ಹೈರಾಣು', 'ಜಿಲ್ಲಾಡಳಿತವೇ ಹೆಚ್ಚಿಸಿದೆ ಮರಳು ಬೆಲೆ'. 'ಹೊಸನಗರದಲ್ಲಿ ಮರಳು ನೀತಿಯೇ ಇಲ್ಲ'. ಚಿಕ್ಕಮಗಳೂರಿನಲ್ಲಿ ಏನಿದೆ ಎಂದರೆ, 'BPL ಅಕ್ಕಿಗಿಂತ ಮರಳು ತುಟ್ಟಿ'. 'ಕೇಳಿದರೆ ದುಡ್ಡು ಸಿಕ್ಕಿಬಿಡುತ್ತದೆ, ಉಸುಕು ಸಿಗುವುದಿಲ್ಲ'. ಕಾರವಾರದಲ್ಲಿ ಹೀಗಿದೆ. 'ಮರಳು ಲೂಟಿಯಲ್ಲಿ ಅಕ್ರಮ-ಸಕ್ರಮ', 'ಫಿಲ್ಟರ್

ಮರಳುಗಾರಿಕೆಯಿಲ್ಲ, ನದಿ ತೀರ ಬಗೆಯುವುದು ನಿಂತಿಲ್ಲ'. ಹಾವೇರಿಯಲ್ಲಿ ಹೀಗಿದೆ. 'ಮರಳು ನೀತಿ ಬಿಗಿಯಾದಷ್ಟೂ ಅಧಿಕಾರಿಗಳಿಗೆ ಸೊಂಪು'. 'ಜಿಲ್ಲೆಗೆ ಮರಳು ಬರ, ಹೊರ ಜಿಲ್ಲೆಗೆ ಭರಪೂರ'. 'ತುಂಗಭದ್ರೆ ಮತ್ತು ವರದೆ ಮಡಿಲು ಬಂದು'. 'ತೋರಿಕೆಗೆ GPS stockyard'. ಹಾವೇರಿಯ ರಾಣಿಬಬೆನ್ನೂರಿನದು last time ನಾನು ಒಂದು example ಕೊಟ್ಟಿದ್ದೆ. ಅದು ಏನೂ ಆಗಲಿಲ್ಲ. ನಾನು 3–4 ತಿಂಗಳುಗಳ ಹಿಂದೆ ನಿಮಗೆ ಪತ್ರ ಕೂಡ ಬರೆದು ನಿಮ್ಮ ಕಡೆಗೆ ಕಳುಹಿಸಿಕೊಟ್ಟೆ. ಇವತ್ತಿಗೂ ಆ ಫಿಲ್ಟರ್‌ದು ದಂಧೆ ನಡೆಯುತ್ತಿದೆ. ಏನೂ ಬದಲಾಗಲಿಲ್ಲ. ಕಲ್ಬುರ್ಗಿಯಲ್ಲಿ 'ದಂಡಾಧಿಕಾರಿ ಬಳಸುವವರೇ ಇಲ್ಲವೆಂದ ಮೇಲೆ ಮರಳು ಲೂಟಿ ನಿಂತಿದ್ದು ಹೇಗೆ ಸ್ವಾಮಿ', open ಆಗಿ ಇದೆ. 'royalty ಕಟ್ಟುವುದಕ್ಕೆ ಕಳ್ಳದಾರಿಕೆ o.k.', 'ಜಿಲ್ಲೆಯ ಸಪ್ತನದಿಗಳ ಒಡಲು ಬಗೆದು ಮರಳು ಲೂಟಿ ನಿರಂತರ'. ಇಲ್ಲಿ ಹೇಳುತ್ತಾರೆ. 'ತುಂಗಭದ್ರ, ಮಲಪ್ರಭ ಮತ್ತು ಕಷ್ಣಾ ಮತ್ತು ತುಂಗಭದ್ರ ನದಿಗಳ ಒಡಲು ಬಗೆತ ಅವ್ಯಾಹತ'. ಗದಗ ಜಿಲ್ಲೆಯಲ್ಲಿ 'ಅಕ್ರಮ ಮರಳು ದಂಧೆ ಕೃಷಿ ಭೂಮಿಯಲ್ಲಿ ಅಕ್ರಮ ಮರಳು ದಂಧೆ ಶುರು'.

ಅಧ್ಯಕ್ಷರು:– ಇದು ರಾಜ್ಯವಾಪ್ತಿ ನಡೆಯುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:– ರಾಜ್ಯವ್ಯಾಪ್ತಿ ಎಲ್ಲಾ ಕಡೆಯಲ್ಲಿಯೂ ಇದೆ ಸರ್. ಬೆಂಗಳೂರಿನಲ್ಲಿ ನಡೆಯುತ್ತಿರುವುದನ್ನೂ ಹೇಳಿದ್ದಾರೆ.

ಅಧ್ಯಕ್ಷರು:– ಆಯಿತು. ಈಗ ಹೇಗೆ ನಿಯಂತ್ರಣ ಮಾಡುವುದು ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:– 'ತಮಿಳುನಾಡಿನ ಮಾದರಿ ಬಂದರೂ ಅಕ್ರಮ ಮರಳು ದಂಧೆ ನಿಂತಿಲ್ಲ', ಇದು ಉದಯವಾಣಿಯಲ್ಲಿ ಬಂದಿದೆ. ನಾಲ್ಕು ಬಲಿ ಇದ್ದರೂ . . . ಅಂದರೆ ಇವರಿಗೆ ಗುರುತು ಆಗಬೇಕು ಸರ್. ಇವರು ಇಲಾಖೆಯವರು ಇದ್ದಾರೋ, ಇಲ್ಲವೋ ಗೊತ್ತಿಲ್ಲ. ಇವರ ಗಮನಕ್ಕೆ ಇದನ್ನೂ ಸಹಿತ ನಾನು ತರುತ್ತಿದ್ದೇನೆ.

ಅಧ್ಯಕ್ಷರು:– ಈ ಹಿನ್ನೆಲೆಯಲ್ಲಿ ಯಾವ ರೀತಿ ನಿಯಂತ್ರಣ ಮಾಡಬೇಕು ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:– 'ನಾಲ್ಕು ಬಲಿ ಬಿದ್ದರೂ ಮೂಗು ದಾರವಿಲ್ಲ'. ಇದರಲ್ಲಿ ನಾಲ್ಕು ಜನರು ಸತ್ತು ಹೋದರು. 'ಕೋಟಿ ಕೋಟಿ ಲೂಟಿ ಅಧಿಕಾರಿಗಳ ಜೇಬು ಭರ್ತಿ'. 'ಮೌನ ಮಾತೆಯರ ದಯನೀಯ ಸ್ಥಿತಿ, ಉತ್ತರ ಕನ್ನಡದ ಜೀವನದಿಗೆ ಈಗ ನಿತ್ಯ ಹಿಂಸೆ'. ಉಡುಪಿಯಲ್ಲಿ ಹೀಗಿದೆ 'ಭೂಮಿ ಬಗೆಯುವ ಕೈಗಳನ್ನು ಕೇಳುವವರಿಲ್ಲ'. ಮಂಗಳೂರಿನಲ್ಲಿ ಹೀಗಿದೆ. 'ಅಕ್ರಮ ರಹದಾರಿ, ಕೇರಳಕ್ಕೆ 22 ದಾರಿ'. ಇವುಗಳನ್ನು ನೀವು ನೋಡಿಬಿಟ್ಟರೆ ಮುಗಿದು ಹೋಯಿತು. ಯಾವ ರೀತಿಯಲ್ಲಿ ಇವತ್ತು ನಡೆಯುತ್ತಿದೆ ಎಂದರೆ, ನಿಮಗೆ ಬೇಕಾದರೆ ಫೋಟೋವನ್ನು ಸಹಿತ ಕಳುಹಿಸಿಬಿಡುತ್ತೇನೆ. ಪ್ರತಿಯೊಂದು ಜಿಲ್ಲೆಯ ಫೋಟೋಗಳು ಇವೆ. ಕಾರವಾರ ಜಿಲ್ಲೆ, ಯಾದಗಿರಿ ಜಿಲ್ಲೆ, ತುಮಕೂರಿನ ಫೋಟೋಗಳಿವೆ. ಯಾವ ರೀತಿಯಾಗಿ ಅಕ್ರಮವಾಗಿ ನಡೆಯುತ್ತಿದೆ ಎನ್ನುವ ಬಗ್ಗೆ ಅಗ್ನಿಸಾಕ್ಷಿಯಿವೆ. ಇವುಗಳನ್ನು ನೋಡಿಬಿಟ್ಟರೆ ಇಷ್ಟೆಲ್ಲಾ open ಆಗಿ ನಡೆಯುತ್ತಿದ್ದರೂ ಸರ್ಕಾರ ಇದರ ಬಗ್ಗೆ ಗಮನಹರಿಸುತ್ತಿದೆಯೋ ಇಲ್ಲವೋ ಅನಿಸುತ್ತದೆ. ಇವುಗಳನ್ನೆಲ್ಲ ನೋಡಿದರೆ, 'ಏನಪ್ಪ ಆಡಳಿತ ವ್ಯವಸ್ಥೆ ಕುಸಿದು ಹೋಗಿದೆಯೇ' ಎನ್ನುವಂತಹದ್ದು ಬರುತ್ತದೆ. ಅದೇ ಕಾರಣಕ್ಕೆ ನಾನು ಹೇಳುತ್ತಿದ್ದೇನೆ. Governor's address ಮೇಲೆ ನಾವು ಅದನ್ನೇ ಮಾತನಾಡಿದ್ದೇವೆ. ಈ ರೀತಿಯಾಗುತ್ತಿದೆ, ಆಡಳಿತದಲ್ಲಿ ಬಿಗಿಯಿಲ್ಲದೇ ಹೀಗೆ ಆಗುತ್ತಿದೆ. ಪ್ರತಿ ಹಂತದಲ್ಲಿಯೂ ಇದು ಆಗುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಒಂದು starred question ಗೆ ನೀಡಲಾದ ಉತ್ತರ ನಾನು ನೋಡಿದ್ದೇನೆ. ಮಾನ್ಯ ಸಂಜಯ್ ಪಾಟೀಲ್‌ರವರು 'ಬೆಳಗಾಂ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದರೆ 'ಬಂದಿರುತ್ತದೆ' ಎಂದು ಉತ್ತರಿಸಿದ್ದೀರಿ. ಅಂದರೆ, ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವುದು ದಾಖಲೆಸಹಿತ ಇರುವುದನ್ನು ಸರ್ಕಾರ ಒಪ್ಪಿಕೊಳ್ಳುತ್ತಿದೆ. 'ಬೆಳಗಾಂ ಜಿಲ್ಲೆಯಲ್ಲಿ 2013–14ರಲ್ಲಿ 189 ಅಕ್ರಮ ಮರಳು

ಗಣಿಗಾರಿಕೆ ಪ್ರಕರಣಗಳನ್ನು ಪತ್ತೆಹಚ್ಚಿ ₹ 91 ಲಕ್ಷ ದಂಡ ಸಂಗ್ರಹಿಸಿರುತ್ತದೆ.' ಇದು ಸುಮ್ಮನೆ ನಾಮಕಾವಸ್ಥೆಗೆ ಅಷ್ಟೆ. ಆಮೇಲೆ 2014–15ರಲ್ಲಿ ಜನವರಿ 2015ರ ಅಂತ್ಯಕ್ಕೆ 79 ಅಕ್ರಮ ಮರಳು ಗಣಿಗಾರಿಕೆಯ ಪ್ರಕರಣಗಳನ್ನು ಪತ್ತೆಹಚ್ಚಿ ರೂ. 20.00 ಲಕ್ಷ ದಂಡವನ್ನು ಸಂಗ್ರಹಿಸಲಾಗಿದೆ ನಾಮಕಾವಸ್ಥೆಗೆ ಅಷ್ಟೆ. ಸುಮ್ಮನೆ ಇದು ಒಂದು ಅಷ್ಟೆ. ಇದನ್ನು ನಾನು ಏಕೆ ತೋರಿಸುತ್ತಿದ್ದೇನೆ ಎಂದರೆ, ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದೆ ಎನ್ನುವುದಕ್ಕೆ ಇದನ್ನು ನಿಮಗೆ ಸಾಕ್ಷಿ ತೋರಿಸುತ್ತಿದ್ದೇನೆ.

ಅಧ್ಯಕ್ಷರು:– ನಿಮ್ಮ ಸಲಹೆ ಏನು ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಸಲಹೆ ಹೇಳುತ್ತೇನೆ. ಇದನ್ನು ಸ್ವಲ್ಪ ಇವರಿಗೆ explain ಮಾಡಬೇಕು, ಈ ರಾಜ್ಯದಲ್ಲಿ ಏನಾಗಿದೆ ಎನ್ನುವಂತಹದ್ದು ಸ್ವಲ್ಪ ಇವರಿಗೆ ಗುರುತಾಗಬೇಕು. ತುಮಕೂರು ಜಿಲ್ಲೆಯದು ಇದೆ. ಮಾನ್ಯ ಅಶೋಕ್‌ರವರು filter ಮರಳಿನ ಬಗ್ಗೆ ಹೇಳಿದರು. 'ತುಮಕೂರು ಜಿಲ್ಲೆಯಲ್ಲಿ' ಅಕ್ರಮ ಫಿಲ್ಟರ್ ಮರಳು ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದರೆ 'ಸರ್ಕಾರದ ಗಮನಕ್ಕೆ ಬಂದಿರುತ್ತದೆ' ಎನ್ನುತ್ತಾರೆ. ತುಮಕೂರು ಜಿಲ್ಲೆಯಲ್ಲಿ 2012–13, 2013–14 ಹಾಗೂ 2014–15 ರಲ್ಲಿ ಒಟ್ಟು 10 ಫಿಲ್ಟರ್ ಮರಳು ಗಣಿಗಾರಿಕೆ ಪ್ರಕರಣಗಳನ್ನು ಪತ್ತೆಹಚ್ಚಿದ್ದು, 10 FIR ಗಳು ಸಂಬಂಧಿಸಿದ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದೆ. 25 ವ್ಯಕ್ತಿಗಳು ಅಕ್ರಮ ಫಿಲ್ಟರ್ ಮರಳು ಗಣಿಗಾರಿಕೆಯಲ್ಲಿ ತೊಡಗಿದ್ದು, ಈ ವ್ಯಕ್ತಿಗಳು ಮತ್ತು ಫಿಲ್ಟರ್ ಗಣಿಗಾರಿಕೆಗೆ ಬಳಸಿದ ವಾಹನಗಳ ಮೇಲೆ 10 FIR ಗಳು ದಾಖಲಾಗಿರುತ್ತದೆ, ಅಕ್ರಮ ಮರಳು ದಂಧೆಯಿಂದ ಎರಡು ಸಾವುಗಳ ಕುರಿತು FIR ದಾಖಲಾಗಿರುತ್ತದೆ.' ಅದನ್ನೂ ಒಪ್ಪಿಕೊಳ್ಳುತ್ತೀರಿ. ಎಲ್ಲವನ್ನೂ ಒಪ್ಪಿಕೊಳ್ಳುತ್ತೀರಿ. ಇಷ್ಟೊಂದು open ಆಗಿ, ಬಹಿರಂಗವಾಗಿ ನಡೆದಾಗಿಯೂ ಸಹಿತ ಇವತ್ತು ಕಂಟ್ರೋಲ್ ಆಗುತ್ತಿಲ್ಲ. ಅದಕ್ಕಾಗಿ ಆಡಳಿತ ವ್ಯವಸ್ಥೆ ಬಿಗಿಯಾಬೇಕಾಗಿದೆ. ಇವರು ಒಂದು ಕಾನೂನು ತಂದರು. ಈ ಕಾನೂನನ್ನು ಈಗ ತೋರಿಸುತ್ತೇನೆ. ಅದರಲ್ಲಿ ಎಲ್ಲಾ ಹೇಳಿದ್ದಾರೆ. 203–14ರಲ್ಲಿ ಅದಕ್ಕೆ ಒಂದು amendment ತೆಗೆದುಕೊಂಡು

ಬಂದಿದ್ದೀರಿ. ಇಲ್ಲಿ ಏನು ಹೇಳುತ್ತೀರಿ ಎಂದರೆ, "In exercise of the powers conferred by section – 15 of the Mines and Minerals (Regulation and Development) Act, the Government of Karnataka hereby makes the following rules further to amend the Karnataka Minor Minerals Concessions Rules". ಆ ರೂಲ್ಸ್ ಅನ್ನು amendment ಮಾಡಿದ್ದೀರಿ. ಇಲ್ಲಿ ಒಂದು ಕಡೆ ಹೇಳುತ್ತೀರಿ. ಅದರಲ್ಲಿ ಏನೇನು ಹೇಳಿದ್ದೀರಿ ಎಂದರೆ, 'Amendment Rule 31 (R)' ಅದರಲ್ಲಿ ತಾಲ್ಲೂಕಿನಲ್ಲಿ ಒಂದು ಕಮಿಟಿ ಮಾಡಿದ್ದೀರಿ, Assistant Commissioner of respective Sub-Division ಅದಕ್ಕೆ Chairman ಆಗಿದ್ದಾರೆ. ಅಲ್ಲಿ ತಹಶೀಲ್ದಾರರು Member ಆಗಿರುತ್ತಾರೆ, Executive Officer Member ಆಗಿರುತ್ತಾರೆ, concerne Inspector, Range Forest Officer, ತಾಲ್ಲೂಕು Social Welfare Officer, concerned PDO's ಹೀಗೆ 10–12 ಜನರು ಈ ತಾಲ್ಲೂಕು ಕಮಿಟಿಗೆ ಸದಸ್ಯರಾಗಿರುತ್ತಾರೆ.

ಒಬ್ಬ ಮಾನ್ಯ ಸದಸ್ಯರು:– ಇದು task force ಏನು?

ಶ್ರೀ ಜಗದೀಶ್ ಶೆಟ್ಟರ್:– ಹೌದು task force ಎಂದು ತಿಳಿದುಕೊಳ್ಳಿ. ಅದು ಒಂದು ಕಮಿಟಿ. ಆಮೇಲೆ 1(B) ಯಲ್ಲಿ "Powers and Functions of the District Sand Monitoring Committee: The District Committee shall exercise the following powers and perform the following functions viz., The District Committee shall meet atleast once in two months." ಆಮೇಲೆ ಇವರು ತಿಂಗಳಿಗೆ ಒಮ್ಮೆ ಮೀಟಿಂಗ್ ಸೇರಬೇಕೆಂದು ಇದೆ, ಈ ತಾಲ್ಲೂಕು ಕಮಿಟಿಯವರು ಮೀಟಿಂಗ್ ಮಾಡಬೇಕೆಂದು ಇದೆ. ಎರಡು ತಿಂಗಳಿಗೆ ಒಂದು ಸಲವಾದರೂ ಮೀಟಿಂಗ್ ಮಾಡಬೇಕೆಂದು ಇದೆ. "…. Shall notify the sand blocks after recording the recommendations of the taluk committee … ಎಂದು ಇದೆ. The Deputy Director or the Senior Geologist, as the case may be, in the distict shall submit quarrying plan and environment management ….. ಎಂದು ಇದೆ. examine and approve by a resolution the recommendations. . ." ಇದರ

ಬಗ್ಗೆ ಬಹಳ ಇವೆ. ಆಮೇಲೆ The Taluka Committee shall exercise the following powers and perform the following functions viz., The Taluka Committee shall meet once in a month at place of convenience." ಎಂದು ಇದೆ. ಅವರು ಮುಂದೆ 'conduct field inspection'. ಎಂದು ಇದೆ. ಅಂದರೆ field inspection ಮಾಡಬೇಕು. ಎಷ್ಟು ಸಲ ಮಾಡಿದ್ದಾರೆ ಗೊತ್ತಾ? ನೀವು ಬೇಕಾದರೆ ರಿಪೋರ್ಟ್ ತರಿಸಿಬಿಡಿ. ಮಾನ್ಯ ಅಧ್ಯಕ್ಷರೆ, ನೀವು ಇದಕ್ಕೆ ಏನು solution? ಎಂದು ಕೇಳುತ್ತೀರಿ. ಇದಕ್ಕೆ ಎಲಾ ರೂಲ್ಸ್ ಮಾಡಿದ್ದಾರೆ ಅಲ್ವಾ? District committee ಹಾಗೂ ತಾಲ್ಲೂಕು ಕಮಿಟಿ ಮಾಡಿದ್ದಾರೆ. ಆದರೆ ಇವುಗಳ activities ಇಲ್ಲ. ಇವರ activities ಏನು ಎಂದರೆ ಮಾಮೂಲು ವಸೂಲಿ ಮಾಡುವುದು ಅಷ್ಟೆ. ಮಾಮೂಲಿ ವಸೂಲಿ ಮಾಡುವುದಕ್ಕೆ ಇವೆಲ್ಲಾ powers, restrictions ಆಗಿವೆ. ಈಗ ಸುಪ್ರೀಂಕೋರ್ಟ್ ರೂಲಿಂಗ್, ಮತ್ತೊಂದು ಎಂದು ಈ restrictions ಹಾಕುತ್ತಿದ್ದೀರಿ. ಇವೆಲ್ಲಾ ಬರಿದಾಗುತ್ತಿದೆ, ಅಂತರ್ಜಲ ಕಡಿಮೆಯಾಗುತ್ತಿದೆ ಎಂದು ಇದಕ್ಕೆ restrictions ಏನು ಹಾಕಿದ್ದೀರೋ ಆ restrictions ನ ದುರುಪಯೋಗ ಆಗುತ್ತಿದೆ. ಅದಕ್ಕೆ ಪೂರಕವಾಗಿ ನೀವು ಕಾನೂನು ತೆಗೆದುಕೊಂಡು ರೂಲ್ಸ್ ಮಾಡಿದಿರಿ. ಈ district committee, ತಾಲ್ಲೂಕು ಕಮಿಟಿ inactive ಆಗಿವೆ. ಎರಡು ತಿಂಗಳಿಗೊಮ್ಮೆ ಮೀಟಿಂಗ್ ಮಾಡಿಲ್ಲ, ತಿಂಗಳಿಗೊಮ್ಮೆ ಮೀಟಿಂಗ್ ಇಲ್ಲ, ಯಾವಾಗಲೂ ಮೀಟಿಂಗ್ ಇಲ್ಲ. ಬೇಕಾದರೆ ದಾಖಲೆ ತೆಗೆದು ನೋಡಿ. ಪ್ರತಿಯೊಂದು ಡಿ.ಸಿ. ಯವರ ಕಡೆಯಿಂದ ರಿಪೋರ್ಟ್ ತರಿಸಿ. ಯಾವ ಮೀಟಿಂಗ್ ಆಗಿಲ್ಲ, ಏನೂ ಆಗಿಲ್ಲ. block ಅನ್ನು ಗುರುತು ಮಾಡಬೇಕು ಎಂದು ಇದೆ. ಆದರೆ ಅದನ್ನು ಗುರುತು ಮಾಡಿಲ್ಲ. ಅಲ್ಲಿ ಆ block ಗುರುತು ಮಾಡಿ ಅದನ್ನು auction ಮಾಡಬೇಕು, ಅದನ್ನೂ ಮಾಡಿಲ್ಲ. ಇಲ್ಲಿ ನೋಡಿ. *Section 1(C) sub clause (2)* ರಲ್ಲಿ The District Committee shall notify the sand blocks, identified by the taluka committee having approved the quarry lan / simplified plan for the information of the general public and obtain environmental

clearance thereof' ಎಂದು ಇದೆ. ಇನ್ನೊಂದು sub clause (3) ಇದೆ. "Public Works Department in the district shall deal with the sand extraction, transportatıon, storage and disposal through mineral dispatch permit at the rates specified by the District Committee from time to time and apportıon the proceeds in accordance with the sub rule..... ಎಂದು ಇದೆ. ಇಲ್ಲಿಯವರೆಗೆ . .

ಅಧ್ಯಕ್ಷರು:- ಏನು ಮಾಡಬೇಕೆಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ನಾನು ಇವತ್ತು ಸಚಿವರಿಗೆ ಕೇಳುತ್ತಿದ್ದೇನೆ. ಇವತ್ತು ಈ ಪ್ರಕಾರ ನಮ್ಮ ಸದನಕ್ಕೆ ಒಂದು statement ಮಾಡಿ. ಇವತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಈ ತಾಲ್ಲೂಕು ಕಮಿಟಿಗಳು ಯಾವಾಗ ಸೇರಿದ್ದವು? Dıstrıct committee ಗಳು ಯಾವಾಗ ಸೇರಿದ್ದವು? Field ಗೆ ಹೋಗಿ examine ಮಾಡಿದ್ದಾರೋ ಅಥವಾ ಇಲ್ಲವೋ? ಇವೆಲ್ಲವನ್ನೂ ಏನಾದರೂ ಮಾಡಿದ್ದರೆ . .

ಅಧ್ಯಕ್ಷರು:- ವಸೂಲು ಆಗಿದ್ದು ಲೆಕ್ಕ ಕೊಡುವುದು ಬೇಡವೇ?

ಶ್ರೀ ಜಗದೀಶ್ ಶೆಟ್ಟರ್:- ಅದನ್ನೂ ಲೆಕ್ಕ ಕೊಡಲಿ. Legal and illegal ಆಗಿ ವಸೂಲು ಮಾಡಿದ್ದರೆ, ಅದೂ ಕೊಡಲಿ. Legal ಎಂದರೆ, ₹ 20–30 ಲಕ್ಷಗಳು ಬರುತ್ತದೆ. ಸ್ವಲ್ಪ ಲೆಕ್ಕಕ್ಕೆ ಏನಾದರೂ action ತೆಗೆದುಕೊಂಡೆವು ಎಂದು ತೋರಿಸಬೇಕಲ್ಲವೇ? ಇನ್ನು illegal ಬೇರೆ ಇದೆ. ಸರ್ ನಾನು ಹೇಳುತ್ತೇನೆ, more than ₹ 500 crores ಪ್ರತಿ ತಿಂಗಳು ಇದೆ. More than 5000 to 6000 crores rupees ಭ್ರಷ್ಟಾಚಾರ ನಡೆಯುತ್ತಿದೆ. ಇವತ್ತು legally ಸರಿಯಾಗಿ block ಮಾಡಿ, ಟೆಂಡರ್ ತೆಗೆದು ಮರಳು ಹಂಚಿದರೆ, ಬಹುಶಃ 4,000 ರಿಂದ 5,000 ರೂ. ಗಳು ಒಂದು ಲೋಡ್‌ಗೆ ಸಿಗುತ್ತದೆ. ಟ್ರಕ್ ಅಸೋಸಿಯೇಷನ್ ರವರು ನನ್ನ ಬಳಿ ಬಂದಾಗ ಲೆಕ್ಕ ಹೇಳಿದರು. ಕಾನೂನು ಬದ್ಧವಾಗಿ ಎಲ್ಲವನ್ನು ಸರಿಯಾಗಿ ಮಾಡಿದರೆ 4,000 ರಿಂದ 5,000 ರೂ. ಗಳು ಒಂದು ಲೋಡ್‌ಗೆ ಸಿಗುತ್ತದೆ. ಇನ್ನು ನಮ್ಮ ಧಾರವಾಡದಲ್ಲಿ 25,000 ರಿಂದ 30,000

ರೂ. ಗಳವರೆಗೆ ಒಂದು ಲೋಡ್‌ಗೆ ಸಿಗುತ್ತದೆಯೆಂದರೆ ಮಧ್ಯದಲ್ಲಿ amount ಏನಿದೆ, ಆ ಗ್ಯಾಪ್ ಭ್ರಷ್ಟಾಚಾರ. ಅಲ್ಲಿ Inspector ಗೆ, PDO ಗೆ, BDO ಗೆ, ಗಣಿ ಇಲಾಖೆಯವರಿಗೆ ಮತ್ತು local ನಲ್ಲಿ ಯಾರು strong political leaders ಇರುತ್ತಾರೆ ಅವರಿಗೆ, ತಹಸೀಲ್ದಾರ್‌ಗೆ ಕೊಡಬೇಕು. ಒಂದು ಇಲಾಖೆಗೆ ಕೊಟ್ಟರೆ ಅಡ್ಡಿಯಿಲ್ಲ. ಎಲ್ಲಾ ಇಲಾಖೆಗೂ ಕೂಡ ಮಾಮೂಲನ್ನು ಹಂಚಿ ಅವರು ಬರಬೇಕು. ಮಾಮೂಲು ತೆಗೆದುಕೊಳ್ಳುವವರಿಗೆ ಯಾವುದೇ ಭಯವಿಲ್ಲ. ಕಾನೂನುಬದ್ಧವವಾಗಿ ಮಾಡುವವರಿಗೆ ಬಹಳಷ್ಟು ಹಿಂಸೆಯಿದೆ. ಅಸೋಸಿಯೇಷನ್‌ನವರು ನನ್ನ ಬಳಿ ಬಂದು ನೀವೊಂದು ಸಹಾಯ ಮಾಡಬೇಕೆಂದು ಹೇಳಿದರು, ಏನೆಂದು ಕೇಳಿದರೆ, ನಾವು ಸ್ವಲ್ಪ ಮಾಮೂಲು ಕೊಡುವುದಕ್ಕೆ ತಯಾರಿದ್ದೇವೆ, ಬಹಳ costly ಆಗುತ್ತದೆ, Police Commissioner ಹೇಳಿ ಸ್ವಲ್ಪ ಕಡಿಮೆ ಮಾಡಿಸಿ ಎಂದು ಹೇಳಿದರು. Reasonable ಆಗಿ ತೆಗೆದುಕೊಳ್ಳುವುದಕ್ಕೆ ಹೇಳಿ ಎಂದರು. ನಾನು ಈ ರೀತಿಯಾದ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ, ನಾನು ಸದನದ ಮೂಲಕ ಸರ್ಕಾರಕ್ಕೆ ಏನು ಒತ್ತಾಯ ಮಾಡಬೇಕೊ ಅದನ್ನು ಹೇಳುತ್ತೇನೆ, ಈ corruption ಗೆ ನಾನು scope ಕೊಡುವುದಿಲ್ಲ, ಸರ್ಕಾರ ಹಾಗೂ ಅಧಿಕಾರಿ ಇದಕ್ಕೆ involve ಆಗಿದೆಯೆಂದರೆ ಇದು ತಪ್ಪು, ಅದನ್ನು ಕಡಿಮೆ ಮಾಡು, ಹೆಚ್ಚು ಮಾಡು ಎಂದು ಅದಕ್ಕೆ ನಾನು mediator ಆಗುವುದಕ್ಕಾಗುವುದಿಲ್ಲವೆಂದು ಹೇಳಿದೆ. ಇದನ್ನು ನನಗೆ ಅವರು open ಆಗಿ ಹೇಳಿದರು. ನನ್ನ ಕಡೆ ಬರೆದುಕೊಟ್ಟಿರುವ ಲಿಖಿತ ಕಾಪಿ ಕೂಡ ಇದೆ. Memorandum ನಲ್ಲಿ ಇಷ್ಟು ಭ್ರಷ್ಟಾಚಾರ ನಡೆಯುತ್ತಿದೆಯೆಂದು ಹೇಳಿದ್ದಾರೆ. ಇಷ್ಟು ಬಹಿರಂಗವಾಗಿ ನಡೆಯುತ್ತಿದೆ. ಎಲ್ಲರ ಗಮನಕ್ಕೆ ಬಂದು, ಇಡೀ ರಾಜ್ಯದಲ್ಲಿ ಈ ವಿಷಯ ಚರ್ಚೆಯಾಗುತ್ತಿದೆ. ನೀವೇನು ನಿಯಮ ಮಾಡಿಕೊಂಡಿದ್ದೀರಿ, ನೀವೇನು ಗೈಡ್‌ಲೈನ್ಸ್ ಮಾಡಿಕೊಂಡಿದ್ದೀರಿ, ಇದನ್ನಾದರೂ ಸರಿಯಾಗಿ implement ಮಾಡಿ. ಆ ಬ್ಲಾಕ್‌ಗಳನ್ನು ಗುರುತು ಮಾಡಿ, ನೀವು ಸರ್ಕಾರದಿಂದ action ಮಾಡುವ ಕೆಲಸವನ್ನು ಮಾಡಿ. ಕೆಲವು ಕಡೆ ಬ್ಲಾಕ್ ಮಾಡಿದ್ದಾರೆ, ಅಲ್ಲಿಂದ ಯಾರೂ ಕೂಡ ಮರಳನ್ನು

ತೆಗೆದುಕೊಳ್ಳುವುದಿಲ್ಲ. ನೇರವಾಗಿ ಅವರೇ ಜೆ.ಸಿ.ಬಿ.ಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ರಾತ್ರಿ ಹೋಗಿ, ಟ್ರಕ್‌ನಲ್ಲಿ ತೆಗೆದುಕೊಂಡು ಬರುತ್ತಾರೆ. ಹಗಲು ದರೋಡೆ ನಡೆಯುತ್ತಿದೆ. ವರ್ಷಕ್ಕೆ ಕನಿಷ್ಟ 5,000 ರಿಂದ 6,000 ಕೋಟಿ ರೂ.ಗಳವರೆಗೆ ಭ್ರಷ್ಟಾಚಾರ ಇದರಲ್ಲಿ ನಡೆಯುತ್ತಿದೆ. ಇನ್ನೂ ಹೆಚ್ಚಿರಬಹುದು, ಕಡಿಮೆಯಿರಬಹುದು, ನನಗೆ ಗೊತ್ತಿಲ್ಲ. ಇಷ್ಟು ಮಾತ್ರ ನಡೆಯುತ್ತಿದೆ. ಕೇವಲ ಒಂದು ಜಿಲ್ಲೆಯೆಂದಲ್ಲ / ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಇದಕ್ಕೆ ನಿಯಂತ್ರಣ ಹಾಕುವುದಕ್ಕೆ ಇದೇ ಒಂದು ದಾರಿಯಾಗಿದೆ. ಈ ರೀತಿ ಮಾಡಿದರೆ ಏನಾದರೊಂದು ನಿಯಂತ್ರಣಕ್ಕೆ ಬರುವುದಕ್ಕೆ ಸಾಧ್ಯವಿದೆ. ಇದಕ್ಕಾಗಿ ಒಂದು ಇಚ್ಛಾಶಕ್ತಿ, ಒಂದು ದೃಢ ನಿರ್ಧಾರವನ್ನು ಮಾಡಿ ಇದನ್ನು ಕಡಿಮೆ ಮಾಡುತ್ತೇನೆಂದು ಹೇಳಿ. ಇಲ್ಲವಾದರೆ ಇದು ಬಹುಶಃ ಇನ್ನೂ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಇದರ ಬಗ್ಗೆ ಒಂದು ನಿಯಂತ್ರಣವಾಗಬೇಕು. ಅಕ್ರಮ ಮರಳು ಗಣಿಗಾರಿಕೆ ಬಗ್ಗೆ ಪ್ರತಿ ಬಾರಿ ಸದನದಲ್ಲಿ ಚರ್ಚೆ ಮಾಡುವುದೇ ಆಗಿದೆ, ನೀವು ಆ ಸಮಿತಿ ಮಾಡಿದ್ದೇವೆ, ಇದು ಮಾಡಿದ್ದೇವೆಂದು ನೀವು ಭರವಸೆ ಕೊಡುತ್ತೀರಿ. ಆದರೆ ಪದೇ ಪದೇ ಇದೇ ರೀತಿ ಆಗುತ್ತಿದೆ. Specific ಆಗಿ ನಾನೇನು ಕೆಲವು ವಿಚಾರಗಳನ್ನು ಹೇಳಿದ್ದೇನೆ, ಅದರ ಬಗ್ಗೆ ಒಂದು clear statement ಮಾಡಿ. ಎಲ್ಲೆಲ್ಲಿ ಸಭೆಯಾಗಿದೆಯೆಂಬ ಬಗ್ಗೆ ಒಂದು ಮಾನಿಟರ್ ಮಾಡಿ, ಇದಕ್ಕೆ alternative ದಾರಿ ಏನಿದೆ ಅದನ್ನೂ ಹುಡುಕಿ, ನಾವು ನಿಮಗೆ ಪೂರ್ಣ ಸಹಕಾರ ಕೊಡುತ್ತೇವೆ. ಮೊದಲೆಲ್ಲಾ excise ಲಾಬಿ, ಗಣಿ ಲಾಬಿ, real estate ಲಾಬಿ, education ಲಾಬಿ ಎಂದು ಇತ್ತು ಇದೆಲ್ಲಕ್ಕಿಂತ ದೊಡ್ಡ ಲಾಬಿಯೆಂದರೆ ಈ ಅಕ್ರಮ ಮರಳುಗಾರಿಕೆ ಲಾಬಿಯಾಗಿದೆ. ಇದು ಕರ್ನಾಟಕದಲ್ಲಿಯೇ ದೊಡ್ಡ ಲಾಬಿಯಾಗಿದೆ. ಇದರ ಹಿಂದೆ ಯಾರ್ಯಾರು involve ಆಗಿದ್ದಾರೆ? ಬಹಶಃ ನಾವೆಲ್ಲರೂ ಕೂಡಿ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಆ ದೃಷ್ಟಿಯಿಂದ ನೀವು strict ಆಗಿ, ಒಂದು commitment ಮಾಡಿಕೊಂಡು, ಇದನ್ನು ಮಾಡಿ. ನೀವು ಮನಸ್ಸು ಮಾಡಿದರೆ, ಇದನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿದೆ. ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿದೆ. 25,000, 30,000 ರೂ. ಗಳನ್ನು

ಕೊಟ್ಟು ಒಂದು ಲೋಡ್ ಮರಳನ್ನು ತೆಗೆದುಕೊಂಡು ಗ್ರಾಹಕರು ಸಾಯುತ್ತಿದ್ದಾರೆ. ಬೆಂಗಳೂರಿನಲ್ಲಿ ಒಂದು ಲಕ್ಷಕ್ಕೆ ಒಂದು ಲೋಡ್ ಮರಳನ್ನು ತೆಗೆದುಕೊಂಡು ಗ್ರಾಹಕರು ಮನೆಗಳನ್ನು ಎಲ್ಲಿ ಕಟ್ಟುವುದಕ್ಕೆ ಸಾಧ್ಯವಿದೆ? Middle class people, poor people ಮನೆಗಳನ್ನು ಎಲ್ಲಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ? ಸರ್ಕಾರದ ಕೆಲಸ-ಕಾರ್ಯಗಳಿಗೂ ಕೂಡ ತೊಂದರೆಯಾಗುತ್ತಿದೆ. ಇಷ್ಟೆಲ್ಲಾ ತೊಂದರೆ ಅನುಭವಿಸುತ್ತಿರುವುದು ನಿಮಗೆ ಗೊತ್ತಿದೆ, ಆದ್ದರಿಂದ ತಕ್ಷಣ ಕ್ರಮ ಕೈಗೊಳ್ಳಬೇಕು. Strict ಆಗಿ ಒಂದು discipline ತೆಗೆದುಕೊಂಡು ಬನ್ನಿ, ಸರಳವಾಗಿ, ಕಡಿಮೆ ಬೆಲೆಯಲ್ಲಿ ಗ್ರಾಹಕರಿಗೆ ಮರಳು ಸಿಗುವಂತಹ ವ್ಯವಸ್ಥೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು 'ಅನ್ನಭಾಗ್ಯ'ದಲ್ಲಿ ಸಿಗುವ ಅಕ್ಕಿಗೆ ಒಂದು ಕೆ.ಜಿ. ಅಕ್ಕಿಗೆ ಒಂದು ರೂಪಾಯಿ ಎಂದು ಹೇಳಿದರು. ನಮ್ಮಲ್ಲಿ ಒಂದು ಕೆ.ಜಿ. ಮರಳಿಗೆ ಎರಡು ರೂ. ಗಳು. ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಯಾವ ರೀತಿ 'ಅನ್ನಭಾಗ್ಯ'ದಲ್ಲಿ ಅಕ್ಕಿ ಕೊಡುತ್ತೀರೋ, ಅದೇ ರೀತಿ 'ಮರಳು ಭಾಗ್ಯ' ಕರುಣಿಸಿ ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇವೆ.

ಎರಡನೆಯದಾಗಿ ಚಿನ್ನದ ಮೊಟ್ಟೆಯನ್ನು ಇಡುವ ಕೋಳಿಯ ಹೊಟ್ಟೆಯನ್ನು ಬಗೆದರೆ ಮೊಟ್ಟೆಯೂ ಇಲ್ಲ, ಕೋಳಿಯೂ ಇಲ್ಲ. ಇಂದು ಮರಳು ಗಣಿಗಾರಿಕೆ ಅದೇ ರೀತಿಯಾಗಿದೆ. ಯಾವುದೇ ರೀತಿ ವೈಜ್ಞಾನಿಕವಾಗಿರುವ ನಿಬಂಧನೆಗಳಿಲ್ಲ, ನಿಯಂತ್ರಣಗಳಿಲ್ಲ. ನದಿಯ ಒಡಲನ್ನು ಬಗೆದು, ನದಿಯೂ ಇಲ್ಲ ಎನ್ನುವಂತಹ ಸ್ಥಿತಿಯನ್ನು ತಲುಪಿದೆ. ಅದಕ್ಕೆ ನಾವು ಮಾಡಬೇಕಾಗಿರುವುದು ಏನೆಂದರೆ, satellite ಮೂಲಕ deposit ಎಲ್ಲಿದೆ ಎಂಬುದನ್ನು ನಾವು identify ಮಾಡಬಹುದು. ಎಷ್ಟು deposit ಇದೆ? ಪ್ರತಿ ವರ್ಷ ಎಷ್ಟು collect ಆಗುತ್ತದೆ? ಎಷ್ಟು ತೆಗೆಯಬೇಕೆಂದು ವೈಜ್ಞಾನಿಕವಾಗಿ calculate ಮಾಡಿ. ಆ ಮೂಲಕ ಮರಳಿನ spots ಗುರುತಿಸಿ, ಅಲ್ಲಿಗೆ ಮಾತ್ರ ಅನುಮತಿ ಕೊಡಿ. ಉಳಿದೆಲ್ಲವನ್ನು ಬಿಗಿ ಮಾಡಿ. ಆದರೆ ಅದು ಆ ರೀತಿಯಾಗುತ್ತಿಲ್ಲ. ಇದೊಂದು ದೊಡ್ಡ ಮಾಫಿಯಾವಾಗಿ ಬೆಳೆಯುತ್ತಿದೆ. Local

bodies ಅನ್ನು ಬಹುತೇಕ ಗ್ರಾಮಾಂತರ ಭಾಗಗಳಲ್ಲಿ ಈ ಮರಳು ಗಣಿಗಾರಿಕೆ ನಡೆಸುತ್ತಿರುವ ಮಾಫಿಯಾವೇ ನಿಯಂತ್ರಣ ಮಾಡುತ್ತಿದೆ. ನದಿಯ ಒಡಲನ್ನು ಬಗೆದು, ಹಾಳು ಮಾಡಿ ಸರ್ವನಾಶವಾಗುವ ಮುಂಚೆ ಕ್ರಮ ತೆಗೆದುಕೊಳ್ಳಿ, ಈ ಕಡೆ scarcity, ಮರಳೂ ಇಲ್ಲ, ಗ್ರಾಹಕರಿಗೂ ಲಾಭವಿಲ್ಲ. ಕೆಲವು ದಂಧೆಕಾರರ ಹಿಡಿತಕ್ಕೆ ಸಿಲುಕಿ ಒಂದು ಮಾಫಿಯಾವಾಗಿ ಪರಿವರ್ತನೆಯಾಗುತ್ತಿದೆ. ಮರಳು ನೀತಿಯನ್ನು ಸರಿಯಾದ ಪ್ರಮಾಣದಲ್ಲಿ ಅನುಷ್ಠಾನ ಮಾಡಿ, ಅದಕ್ಕೆ ವೈಜ್ಞಾನಿಕ ವಿಧಾನಗಳನ್ನು ಬಳಸಿಕೊಳ್ಳಿ ಎಂದು ಈ ಮೂಲಕ ಹೇಳಲು ಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಬಹಳ ಸುಲಭವಾಗಿ ಈ ಸಮಸ್ಯೆಯನ್ನು solve ಮಾಡಿದ್ದೇವೆ. Court order ನಲ್ಲಿ ಏನಿದೆ ಎಂದರೆ, .. .

ಅಧ್ಯಕ್ಷರು:- ಇದೇ ಮಾಡಿರುವುದೇನು?

ಶ್ರೀ ಗೋವಿಂದ ಎಂ. ಕಾರಜೋಳ:- ಇಲ್ಲ, ಈ ರೀತಿ ಇಲ್ಲ. ನಾನು ಹೇಳಿ ಬಿಡುತ್ತೇನೆ. ನಮ್ಮಲ್ಲಿ ದರ 8,000/- ದಿಂದ ₹ 9,000/- ಕ್ಕೆ ಬಂದಿದೆ. ಮೆಷಿನ್ ಹಾಕಿ ಮರಳನ್ನು ತೆಗೆಯಬಾರದು ಎಂಬುದು ಇರುವ ಸಮಸ್ಯೆಯಾಗಿದೆ. ನಾವು court order ನೋಡಿದಾಗ ಒಂದು ಮೀಟರ್ depth ಗಿಂತಲೂ ಹೆಚ್ಚಿಗೆ ತೆಗೆಯಬಾರದು ಎಂದು ಇದೆ. Labour ಮೂಲಕ ಮರಳನ್ನು ತೆಗೆಯುವುದಾದರೆ ಒಂದು truck ಗೆ ದಿನಕ್ಕೆ ಎರಡು ಲೋಡು ಕೂಡಾ ಆಗುವುದಿಲ್ಲ. ನಾವು ಅದನ್ನೇ JCB ಯಂತ್ರದ ಮೂಲಕ ತೆಗೆದರೆ ದಿನ 150 ರಿಂದ 200 trip ಆಗುತ್ತದೆ. ಅದಕ್ಕಾಗಿ ನಾವು ನಮ್ಮ ಬಾಗಲಕೋಟೆ ಜಿಲ್ಲೆಯಿಂದ ಸರ್ಕಾರದಿಂದಲೇ ಅನುಮತಿ ಪಡೆದು JCB ಯಂತ್ರವನ್ನು ಉಪಯೋಗಿಸಿ, ಒಂದು ಮೀಟರ್‌ಗಿಂತಲೂ ಹೆಚ್ಚಿಗೆ depth ಹೋಗದ ರೀತಿಯಲ್ಲಿ ಮರಳನ್ನು ತೆಗೆಯುತ್ತಿದ್ದೇವೆ. ಈ ರೀತಿ ಮಾಡುವುದರಿಂದ ದಿನನಿತ್ಯ 200 ರಿಂದ 300 trip PWD ಯವರು ತೆಗೆದು stock ಮಾಡಿ ಜನರಿಗೆ ಮರಳನ್ನು ಒದಗಿಸುವುದಲ್ಲದೆ, ಸರ್ಕಾರಿ ಕೆಲಸಕ್ಕು ಕೊಡುತ್ತಿದ್ದಾರೆ. ಬಹಳ ಸುಲಭವಾಗಿ ಸಮಸ್ಯೆ ಪರಿಹಾರವಾಗಿದೆ. ಈಗ ಏನಾಗಿದೆ ಎಂದರೆ,

ಇದನ್ನು ನಾವು ಅರ್ಥ ಮಾಡಿಕೊಳ್ಳದೆ, ಮೆಷಿನ್ ಹಾಕದೆ labour ಮೂಲಕ ಮರಳು ತೆಗೆಯಬೇಕು ಎಂದ ಕೂಡಲೇ ಕಳ್ಳ ದಂಧೆ ಮಾಡುವವರಿಗೆ ಅನುಕೂಲವಾಗಿದೆ. ಅವರು JCB ಯೂ ನಡೆಯುತ್ತದೆ, truck ಕೂಡ ನಡೆಯುತ್ತದೆ, ದಿನನಿತ್ಯ 200-300 trip ಒಬ್ಬೊಬ್ಬರು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಪ್ರತಿ ವರ್ಷ ಕನಿಷ್ಟ 15 ಸಾವಿರ ಕೋಟಿಗಿಂತಲೂ ಹೆಚ್ಚು . .

ಅಧ್ಯಕ್ಷರು:- ಇದನ್ನು ನಿಯಂತ್ರಣ ಮಾಡಲು ಏನು ಮಾಡಬೇಕೆಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- ಹೇಳಿದೆನಲ್ಲ ಸರ್. ಏನೂ ಇಲ್ಲ. ಎಲ್ಲಾ ಜಿಲ್ಲೆಗಳಿಗೂ permission ಕೊಡಿ. JCB ಮೂಲಕವೇ ಮರಳನ್ನು ತೆಗೆಯಲಿ. ಒಂದು ಮೀಟರ್‌ಗಿಂತ ಹೆಚ್ಚು depth ತೆಗೆಯಬಾರದು.

ಅಧ್ಯಕ್ಷರು:- Rule ನಲ್ಲಿ ಮಾಡಿರುವುದು ಏನೆಂದು ಇದೆ?

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ನಾವು ಬಾಗಲಕೋಟೆ ಜಿಲ್ಲೆಯವರು ರೂಲ್‌ನಲ್ಲಿ interpretation ಮಾಡಿ permission ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು:- ಅದನ್ನು ಜಾರಿಗೆ ತರಬೇಕಾದರೆ ಏನು ಮಾಡಬೇಕೆಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- Court ಆದೇಶದ ಪ್ರಕಾರ ಒಂದು ಮೀಟರ್‌ಗಿಂತ ಹೆಚ್ಚಿಗೆ depth ಹೋಗಬಾರದೆಂದು ನಿಬಂಧನೆ ವಿಧಿಸಿ ಎಲ್ಲಾ ಜಿಲ್ಲೆಗಳಿಗೂ ಸರ್ಕಾರ JCB ಯಂತ್ರ ಉಪಯೋಗಿಸಿ ಮರಳು ತೆಗೆಯಲು permission ಕೊಡಬೇಕು.

ಅಧ್ಯಕ್ಷರು:- ಸರ್ಕಾರ permission ಕೊಡುತ್ತದೆ, ಆದರೆ ಅವರು ಎರಡು ಮೀಟರ್ ತೆಗೆಯುತ್ತಾರೆ. ಆಗ ಏನು ಮಾಡುವುದು?

ಶ್ರೀ ಗೋವಿಂದ ಎಂ. ಕಾರಜೋಳ:– ಸರ್ PWD ಯವರು ತೆಗೆಯಬೇಕು. ಈಗ ಏನಾಗಿದೆ ಎಂದರೆ, PWD ಯವರಿಗೆ supply ಮಾಡಲು ಆಗದ ಕಾರಣ ಕಳ್ಳದಂಧೆ ಜಾಸ್ತಿಯಾಗಿದೆ. PWD ಯವರು ದಿನ ಎರಡು trip ತೆಗೆಯುತ್ತಾರೆ. ಕಳ್ಳದಂಧೆಯವರು ಮೆಷಿನ್ ಉಪಯೋಗಿಸಿ 200 trip ತೆಗೆಯುತ್ತಾರೆ.

ಅಧ್ಯಕ್ಷರು:– ಕಾರಜೋಳ ರವರೆ, ನಮಗೆ ಬೇಕಾಗಿರುವುದು ಏನೆಂದರೆ, ಅವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ, ಎಲ್ಲಾ ಗೊತ್ತಿದೆ. ಏನೇನು ಮಾಡಬೇಕೆಂದು ಕಾನೂನನ್ನು ಮಾಡಲಾಗಿದೆ. ತಾಲ್ಲೂಕಿಗೆ ಒಂದು ಕಮಿಟಿ, ಜಿಲ್ಲೆಗೊಂದು ಕಮಿಟಿ, ಪೊಲೀಸಿನವರು, ಎಲ್ಲರೂ ಇದ್ದಾರೆ. ಇಷ್ಟೆಲ್ಲಾ ಇದ್ದರೂ ಕೂಡಾ ಇದು ನಡೆಯುತ್ತಲೇ ಇದೆ. ಇದನ್ನು ಅಚ್ಚುಕಟ್ಟಾಗಿ ನಿಯಂತ್ರಣ ಮಾಡಬೇಕಾದರೆ ಏನು ಮಾಡಬೇಕೆಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿಯೂ ನಡೆಯುತ್ತಿತ್ತು. ಇದನ್ನು ನಿಯಂತ್ರಣ ಮಾಡುವುದಕ್ಕೆ ನಾವು PWD ಯವರಿಗೆ JCB ಉಪಯೋಗಿಸಿ ಮರಳು ಲೋಡು ಮಾಡುವುದಕ್ಕೆ permission ಕೊಟ್ಟಿದ್ದೇವೆ. ಒಂದು ಮೀಟರಿಗಿಂತ ಹೆಚ್ಚು ಆಳಕ್ಕೆ ಹೋಗುವಂತಿಲ್ಲ. ಕಾನೂನು ಪ್ರಕಾರವೇ ಒಂದು ಮೀಟರ್ ಆಳ ತೆಗೆಯಬೇಕೆಂದು ಮಾಡಿದ್ದೇವೆ. ಈಗ ದಿನವೂ PWD ಯವರು 200–300 trip stock ಮಾಡುತ್ತಿದ್ದಾರೆ. ಜನರಿಗೆ ಮರಳು ಸುಲಭವಾಗಿ ಸಿಗುತ್ತಿದೆ. ಒಂದು ಟ್ರಕ್ ಮರಳು 7,000 ದಿಂದ 8,000/– ರೂ. ಗಳಿಗೆ ಸಿಗುತ್ತಿದೆ.

ಶ್ರೀ ವೈ.ಎಸ್.ವಿ. ದತ್ತಾ:– ಇದನ್ನು ಎಲ್ಲಾ ಜಿಲ್ಲೆಗಳಿಗೂ ಮಾಡಿದರೆ ಮುಗಿಯಿತಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಅದನ್ನೇ ಮಾಡಿ ಎಂದು ನಾನು ಹೇಳುವುದು. ಎಲ್ಲಾ ಜಿಲ್ಲೆಗಳಿಗೂ ಮಾಡುವುದರಿಂದ ಈ ಸಮಸ್ಯೆ ಪರಿಹಾರವಾಗುತ್ತದೆ.

ಅಧ್ಯಕ್ಷರು:– ಈಗ over all State supervision ನೀವೇ ಮಾಡಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಸರ್ಕಾರ ನನಗೆ ಕೊಟ್ಟು ಬಿಡಲಿ. ಸರ್ಕಾರ ನನ್ನನ್ನು ನೇಮಿಸಲಿ. ನಾನು 8 ದಿನದಲ್ಲಿ control ಗೆ ತರುತ್ತೇನೆ. 8 ದಿನಗಳಲ್ಲಿ ನಿಯಂತ್ರಣಕ್ಕೆ ತರಲಿಲ್ಲವೆಂದರೆ ನೀವು ಹೇಳಿದಂತೆ ನಾನು ಕೇಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):- ಮಾನ್ಯ ಅಧ್ಯಕ್ಷರೆ, ಮರಳಿನ ಅಭಾವ ಕೃತಕವಾಗಿಯೇ ಉಂಟಾಗಿದೆ. ಏಕೆಂದರೆ ಬೇಡಿಕೆ ಜಾಸ್ತಿಯಾಗಿರುವುದರಿಂದ ಮರಳಿಗೆ ಅಭಾವ ಉಂಟಾಗಿದೆ. ಮೊದಲಿಗೆ ಗ್ರಾಮೀಣ ಪ್ರದೇಶದಲ್ಲಿ ಹೊಳೆಯ ಮರಳನ್ನು ತರಲು ನಾವು ಯಾರೂ ಹೋಗುತ್ತಿರಲಿಲ್ಲ. ಅಲ್ಲಿಯೇ ಮರಳು ಉತ್ಪತ್ತಿಯಾಗುತ್ತಿತ್ತು. ಈಗ ನಾವೂ ಕೂಡಾ ಹೊಳೆಗೆ ಹೋಗುತ್ತಿದ್ದೇವೆ. ಹೊಳೆಯ ಮರಳು ಎಂದು ಹುಡುಕಿಕೊಂಡು ಹೋಗುತ್ತಿದ್ದೇವೆ. Construction works ಜಾಸ್ತಿಯಾಗಿರುವುದರಿಂದ ಎಲ್ಲಾ ಕಡೆ ಅಭಾವ ಉಂಟಾಗಿದೆ. ಇವರಿಗೆ ಒಂದೇ ಒಂದು ದಾರಿ ಎಂದರೆ, MSIL ನವರಿಗೆ ಕೊಡಬೇಕು. liquors ನಲ್ಲಿ ಭ್ರಷ್ಟಾಚಾರ ನಡೆಯುತ್ತಿತ್ತು, ಅದನ್ನು ತಡೆಯಲಾಗುತ್ತಿರಲಿಲ್ಲ. ಈ ವಿಷಯದಲ್ಲಿ MSIL ನವರು ಮಾಡಿದಂತೆ ಒಂದು ಕಡೆ ಎಲ್ಲಿ ಮರಳು ಸಿಗುತ್ತದೆ, ಅಲ್ಲಿ ಒಂದು area ಮಾಡಬೇಕು. PWD ಯವರು ಬರಿ ಒಂದು JCB, ಎರಡು ಟಿಪ್ಪರ್ ಇಟ್ಟುಕೊಂಡರೆ ಆಗುವುದಿಲ್ಲ. ಸಮಗ್ರವಾಗಿ ತೆಗೆಯಬೇಕು, ತೆಗೆದು, ಯಾವುದೇ ಕಾರಣದಿಂದ ಒಂದು ಕಡೆ ಯಾರ್ಡ್ ಮಾಡಿ, ಅಲ್ಲಿಂದ ಯಾರು ಬರುತ್ತಾರೆ, ಅವರಿಗೆ permit ಕೊಟ್ಟು ಮರಳನ್ನು ವಿತರಣೆ ಮಾಡಬೇಕು. ಈಗ ಇಲ್ಲಿ ಏನಾಗುತ್ತಿದೆ? PWED ನಲ್ಲಿ ರಾಜಕೀಯ ಜಾಸ್ತಿಯಾಗುತ್ತಿದೆ. ಅವರು ಮೊದಲೇ ಹೇಳಿ-ಕೇಳಿ PWD ಇಲಾಖೆಯ ಇಂಜಿನಿಯರ್‌ಗಳು. ಅವರು ನಾನು ಹೆದರಿಸಿದರೂ ಹೆದರಿಕೊಳ್ಳುತ್ತಾರೆ, ಅವರು ಹೆದರಿಸಿದರೂ ಹೆದರಿಕೊಳ್ಳುತ್ತಾರೆ. ಎರಡನೆಯದಾಗಿ ಪೊಲೀಸ್ ಇಲಾಖೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಪೊಲೀಸ್ ಇಲಾಖೆಯವರು ಇವರು 'ದಂಧೆ' ಎಂದು ಹೇಳುತ್ತಾರಲ್ಲ, ಆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಗೊತ್ತಿಲ್ಲದೆ ಒಂದು ಲೋಡ್ ಮರಳು ಹೊರಗೆ ಬರಲು ಸಾಧ್ಯವೇ? ಎಲ್ಲಾ ಮಾಮೂಲಿ fix

ಮಾಡಿಕೊಳ್ಳುತ್ತಾರೆ. ಬೇಲೂರಿನಲ್ಲಿ, ಹೊಳೆನರಸೀಪುರದಲ್ಲಿ ಪ್ರಾರಂಭವಾದರೆ ಬೆಂಗಳೂರಿಗೆ ಬಂದು ಮರಳು unload ಆಗುವವರೆಗೆ ಪೊಲೀಸರಿಗೆ ಎಲ್ಲಾ ಗೊತ್ತು. ಪೊಲೀಸರು ಮನಸ್ಸು ಮಾಡಿದರೆ ಇದನ್ನು ನಿಲ್ಲಿಸಬಹುದು. ಒಂದು ಸುಗ್ರೀವಾಜ್ಞೆ ತರಲಿ. ಪೊಲೀಸ್‌ನವರು ಈ ದಂಧೆಗೆ ಪ್ರೋತ್ಸಾಹ ಕೊಡುವುದನ್ನು ನಿಲ್ಲಿಸಲಿ. ಅದು BKಗೆ ಲಾರಿ ಬರುತ್ತದೆ? ಅದು main road ನಲ್ಲಿ, ಚನ್ನರಾಯಪಟ್ಟಣ ಮೂಲಕದವೇ ಲಾರಿ ಬರಬೇಕಲ್ಲವೇ? ಬೆಂಗಳೂರಿಗೆ ಬರಬೇಕಾದರೆ ಇನ್ನು ಯಾವ ಕಡೆಯಿಂದ ಬರುತ್ತದೆ? Police ಇಲಾಖೆಯನ್ನು ತಪ್ಪಿಸಿ ಬರಲಾಗುತ್ತದೆಯೆ? ಇದು ಭ್ರಷ್ಟಾಚಾರಕ್ಕೆ ನಾಂದಿಯಾಗಿದೆ. ಆದುದರಿಂದ ಇದನ್ನು MSIL ರೀತಿ ಮಾಡಬೇಕು. MSIL ಮಾಡಿದ್ದರಿಂದ ಈಗ liquor ನಲ್ಲಿ ಒಂದು ಚೂರಾದರೂ ಭ್ರಷ್ಟಾಚಾರ ನಡೆಯುತ್ತಿಲ್ಲ. ಯಾರು ಮರಳನ್ನು ಉತ್ಪತ್ತಿ ಮಾಡುತ್ತಾರೋ, ಆ ಮರಳನ್ನು ತೆಗೆದುಕೊಂಡು ಹೋಗಿ yard ಗೆ ಹಾಕಲಿ. ಯಾರ‍್ಯಾರು contractors ಇದ್ದಾರೋ, ಅವರು ಮರಳನ್ನು ಮಾರಕೂಡದು. ಒಂದೇ ಒಂದು ಲೋಡ ಮರಳು without permission ಕರ್ನಾಟಕ ರಾಜ್ಯದಲ್ಲಿ ಸಂಚಾರ ಮಾಡಕೂಡದು. ಆ ಕಾನೂನನ್ನು ತರಬೇಕು. ಮರಳನ್ನು ತಂದು, ಒಂದು yard ನಲ್ಲಿ ಹಾಕಿ, ಗುತ್ತಿಗೆ ಯಾರಾದರೂ ಮಾಡಿಕೊಳ್ಳಲಿ. ಅವನು supply ಕೊಡುವಂತಿಲ್ಲ. ಅವನು yard ನಲ್ಲಿ ಮರಳನ್ನು stock ಮಾಡಬೇಕು. ಹಾಗೆ stock ಮಾಡಿದ ಮರಳನ್ನು ಮಾರುವುದಕ್ಕೆ MSIL ಮಾದರಿ ಒಳ್ಳೆಯ ಮಾರ್ಗಸೂಚಿಗಳನ್ನು ತಂದು ಮಾಡಿದರೆ ಮಾತ್ರ ಸಾಧ್ಯವೇ? ಹೊರತು ಇಲ್ಲವಾದರೆ ಇದರಲ್ಲಿನ ಭ್ರಷ್ಟಾಚಾರ ಮುಗಿಲು ಮುಟ್ಟಿ, ಕೊನೆಗೆ ಒಂದು ದಿವಸ ಇದು ಏನಾದರೂ ಆಗುತ್ತದೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕಾನೂನು ತಂದಿದ್ದೇವೆ. ಕಾನೂನಿನಲ್ಲಿ ಸರಿಯಾದ ರೀತಿಯಲ್ಲಿ ಚಾಲನೆ ಕೊಡುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಒಂದು ವರ್ಷಕ್ಕೆ 6 ಸಾವಿರ ಕೋಟಿ ರೂ. ಲಾಸ್ ಆಗುತ್ತದೆ ಎಂದು ಹೇಳಿದರು. ಅದನ್ನು ಯಾವ ಆಧಾರದ ಮೇಲೆ ಹೇಳಿದರು?

ಅಧ್ಯಕ್ಷರು:- ಅದು ಬೇಡ. ಅದನ್ನು ಹೇಗೆ ನಿಯಂತ್ರಣ ಮಾಡಬೇಕೆಂದು ಹೇಳಿ.

ಶ್ರೀ ಕೆ. ಶಿವಮೂರ್ತಿ:- ನಿಯಂತ್ರಣ ಹೇಗೆ ಮಾಡಬೇಕೆಂದರೆ, ಒಂದು ಜಿಲ್ಲೆಯಲ್ಲಿ ಎಷ್ಟು ಮರಳು ಇದೆ ಎಂಬುದನ್ನು ಮೊದಲು assess ಮಾಡಬೇಕು. Requirement of the local area, public purpose ಗೆ ಎಷ್ಟು ಬೇಕಾಗುತ್ತದೆ, private purpose ಗೆ ಎಷ್ಟು ಬೇಕಾಗುತ್ತದೆ? ಹಾಗೆ ಬಡವರು ಮನೆ ಕಟ್ಟುವುದಕ್ಕೆ ಎಷ್ಟು ಪೂರೈಸಬೇಕಾಗುತ್ತದೆ? ಎಂಬ ಕುರಿತು ಒಂದು ನೀತಿ ಜಿಲ್ಲಾ ಮಟ್ಟದ ಕಮಿಟಿಯಲ್ಲಿ ಆಗಬೇಕು. Sir, we should not allow district-to-district transportation. ಅಲ್ಲಿಯೇ smuggling ಆಗುವುದು. ನಮ್ಮ ಸರ್ಕಾರವೇ ಆಡಳಿತದಲ್ಲಿದ್ದರೂ, ಕೆಲವು ಆಪಾದನೆಗಳಿರುವುದನ್ನು ನಾನು ಒಪ್ಪುತ್ತೇನೆ. ರಾತ್ರಿ ಹೊತ್ತಿನಲ್ಲಿ ಕತ್ತಲಾದ ಮೇಲೆ ಲೋಡ್ ಮಾಡುತ್ತಾರೆ, ಬೆಳಿಗ್ಗೆ ಹೊತ್ತಿಗೆ ಲೋಡ್ ಬೆಂಗಳೂರು ತಲುಪುತ್ತದೆ. ಚೆಕ್ ಪೋಸ್ಟ್‌ಗಳಲ್ಲಿ 'ಮಾಮೂಲಿ,' ಇದನ್ನು ನಿಯಂತ್ರಣ ಮಾಡುವುದಕ್ಕೆ ಚೆಕ್‌ಪೋಸ್ಟ್‌ಗಳಲ್ಲಿ ಬಿಗಿ ಮಾಡಬೇಕು. ಪೊಲೀಸಿನವರಿಗೆ ಮಾಮೂಲಿಯಾಗಿದೆ. ನಾವು ಡ್ರೆಸ್‌ನಲ್ಲಿದ್ದೇವೆ, 'ಮಾಮೂಲಿ' ಎನ್ನುತ್ತಾರೆ. ಕೆಲವು ಪೊಲೀಸಿನವರು ಸ್ವತಃ vehicle ಮಾಡಿಕೊಂಡು agents ರೀತಿಯಲ್ಲಿ ಅವರೇ ಸಾಗಿಸುತ್ತಿದ್ದಾರೆ. ಪೊಲೀಸರು ಅವರ ಹೆಸರಿನಲ್ಲಿ private vehicle ನಲ್ಲಿ ಬ್ರಾಂದಿ ಸಾಗಿಸುತ್ತಾರೆ, ಮರಳು ಸಾಗಿಸುತ್ತಾರೆ. ಈ ದಂಧೆ ಮಾಡುತ್ತಿದ್ದಾರೆ. Officers also, ಅವರ relatives ಎಲ್ಲರೂ ಈ ರೀತಿ ಇದ್ದಾರೆ. ಅದು ಒಂದು ಕಡೆ. ಇದರಲ್ಲಿ ದೊಡ್ಡವರೂ ಇದ್ದಾರೆ. ಆದರೆ ಅಮಾಯಕರನ್ನು ಹಿಡಿಯುತ್ತಿದ್ದಾರೆ. ಅಮಾಯಕರು ಎಂದರೆ ಸಣ್ಣ ಟ್ರಾಕ್ಟರ್ ನಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮರಳು ಸಾಗಿಸುವವರನ್ನು ಹಿಡಿದು ಪೊಲೀಸ್ ಸ್ಟೇಷನ್ ನಲ್ಲಿ ಕೇಸ್ ದಾಖಲು ಮಾಡುತ್ತಾರೆ. ದೊಡ್ಡ ದೊಡ್ಡ ಲಾರಿಗಳನ್ನು ಬಿಡುತ್ತಾರೆ. ಸೋರಿಕೆ ಬಗ್ಗೆ, ನಾವು ಜಿಲ್ಲಾವಾರು ಮಾಹಿತಿ ತೆಗೆದುಕೊಳ್ಳಬೇಕು Royalty and penalty ಎಷ್ಟು collect ಆಗಿದೆ? ಎಂಬ ಬಗ್ಗೆ ನಿಖರವಾಗಿ audit ಆಗಬೇಕು. ಇದಕ್ಕೆ assessment and periodical review ಆಗಬೇಕು. ಈಗಾಗಲೇ ಅವರು ಹೇಳಿದರು. Excise ಲಾಬಿ

ಆಯಿತು, education ಲಾಬಿ ಆಯಿತು, real estate ಲಾಬಿಯಾಯಿತು. ಹೀಗೆ ಹೊಸ ಹೊಸ ನಮೂನೆಯ ಲಾಬಿಯಾಗಿ, ಕೆಲವರೇ ಶಕ್ತಿವಂತರು ಇದರ ಉಪಯೋಗ ಪಡೆದುಕೊಳ್ಳುತ್ತಾರೆ. It is a great revenue loss to the government. ಇದನ್ನು avoid ಮಾಡುವುದಕ್ಕೋಸ್ಕರ ಒಂದು ಚೆಕ್ ಪೋಸ್ಟ್, periodical monitoring ಮಾಡಬೇಕು. ಅಲ್ಲಿ ಸ್ವಲ್ಪ vigilance squad ಅನ್ನು ಇಡಬೇಕು. ಸ್ಥಳೀಕರಿಗೆ ಪೂರೈಕೆಯಾಗುವಂತಹದು, requirement, demand of a local area, ಮನೆ ಕಟ್ಟುವವರಿಗೆ, office ಕಟ್ಟುವವರಿಗೆ, ದೇವಸ್ಥಾನ ಕಟ್ಟುವವರಿಗೆ ಏನೂ ತೊಂದರೆ ಮಾಡಬಾರದು. ಟ್ರ್ಯಾಕ್ಟರ್‌ಗಳಲ್ಲಿ ತೆಗೆದುಕೊಂಡು ಹೋಗುವಂತಹ ರೈತರಿಗೆ ಏನೂ ತೊಂದರೆ ಮಾಡಬಾರದು. ದೊಡ್ಡ ದೊಡ್ಡ ಲಾರಿಗಳಲ್ಲಿ district-to-district, district to head quarters, state to state ಇಲ್ಲಿ ಆಗುತ್ತದೆ. ಅದಕ್ಕೋಸ್ಕರ ನಮ್ಮ ಗೌಡರು ಸಲಹೆ ಕೊಟ್ಟ ರೀತಿಯಲ್ಲಿ ಡಿಪೋಗಳನ್ನು ಮಾಡಿ, ಅಲ್ಲಿ ಮರಳು ಶೇಖರಣೆ ಮಾಡಿ, ಆ ರೀತಿಯಲ್ಲಿ ವಿತರಣೆಯಾದರೆ ಸರ್ಕಾರಕ್ಕೆ ರೆವಿನ್ಯೂ ಬರುತ್ತದೆ ಎಂಬ ಸಲಹೆಯನ್ನು ಕೊಡಲಿಚ್ಛಿಸುತ್ತೇನೆ.

ಅಧ್ಯಕ್ಷರು:- ಆಯಿತು, ಮಂತ್ರಿಗಳೇ, ಉತ್ತರ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಅಕ್ರಮವಾಗಗಿ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂಬ ವಿಚಾರ ಬೆಳಗಾವಿ ಅಧಿವೇಶನದಲ್ಲಿಯೂ ಕೂಡಾ ವ್ಯಾಪಕವಾಗಿ ಚರ್ಚೆಯಾಗಿತ್ತು. ಆಗ ಸರ್ಕಾರದ ಪರವಾಗಿ ಸಮಗ್ರವಾದ ಉತ್ತರವನ್ನು ಕೊಟ್ಟೆವು. ಒಂದು ಸದನ ಸಮಿತಿಯನ್ನು ಮಾಡಬೇಕೆಂಬ ಸಲಹೆ ಬಂದ ಹಿನ್ನೆಲೆಯಲ್ಲಿ ಈಗಾಗಲೇ 7 ಜನ ಸದಸ್ಯರನ್ನು ನೇಮಿಸಿ ಸದನ ಸಮಿತಿಯನ್ನು ಕೂಡಾ ರಚಿಸಿದ್ದೇವೆ. ಹಿಂದೆ ಸಾಕಷ್ಟು ವಿಚಾರಗಳನ್ನು ಚರ್ಚೆ ಮಾಡಿರುವ ಹಿನ್ನೆಲೆಯಲ್ಲಿ, ಈಗ ಚರ್ಚೆಯಾಗುತ್ತಿರುವುದರಿಂದ ನಾನು ಹೆಚ್ಚು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ಮುಖ್ಯವಾದ ಸಂಗತಿ ಎಮದರೆ, ಅವರು ವಾದವನ್ನು ಮಾಡುವಾಗ ಎರಡು ರೀತಿ ವಿಚಾರಗಳು ಬಂತು. ಒಂದು, ಬಾಗಲಕೋಟೆಯಲ್ಲಿ ಬಹಳ ಸುಲಭವಾಗಿ ನಡೆಯುತ್ತಿದೆ

ಎಂಬ ಮಾತನ್ನು ಕೂಡಾ ಹೇಳಿದರು. ಬಾಗಲಕೋಟೆಯ ಎಲ್ಲಾ ಶಾಸಕರು ನಾವು ಬೆಳಗಾವಿಯಲ್ಲಿದ್ದ ಸಂದರ್ಭದಲ್ಲಿ ಬಂದು ವಸ್ತು ಸ್ಥಿತಿಯನ್ನು ನಮಗೆ ಮನವರಿಕೆ ಮಾಡಿಸಿದರು. ಅಲ್ಲಿ ಎಸ್.ಆರ್. ಪಾಟೀಲ್ ರವರು ಒಂದು ಸಭೆಯನ್ನು ಕರೆದು, ಕುಳಿತು ಯೋಚನೆ ಮಾಡಿದೆವು. ಅಲ್ಲಿ ಏನಾಗಿದೆ ಎಂದರೆ ಅಲ್ಲಿ ನಾವು ಈಗ permission ಕೊಟ್ಟಿದ್ದೇವೆ, ಮರಳು ಸಮಸ್ಯೆ ಬಗೆಹರಿಯುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇವೆ. ಅದು ವಿಶೇಷವಾದ ಅಧಿಕಾರವನ್ನು ಚಲಾಯಿಸಿ ಅವಕಾಶ ಮಾಡಿದ್ದೇವೆ. ಆದರೆ, ನಮ್ಮ ಪರಿಸರ ಇಲಾಖೆ ಅದಕ್ಕೆ ತಕರಾರು ಮಾಡುತ್ತದೆ. ಇದೇ ರೀತಿ ಬಿಜಾಪುರದಲ್ಲಿ ವಿಶೇಷವಾಗಿ ಸಹಾಯ ಮಾಡಲು ಹೋದಾಗ ನನ್ನ ಮೇಲೆ NGT ನಲ್ಲಿ ಕೇಸು ಹಾಕಿ stay ಮಾಡಿದರು. ಮರಳಿನ ವಿಚಾರ ಪರಿಸರಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಒಂದಲ್ಲ ಒಂದು ರೀತಿಯಾದ ಕಾನೂನುಗಳು ಬರುತ್ತಿವೆ. ಪ್ರತಿ ಸಂದರ್ಭದಲ್ಲಿಯೂ ಕೂಡಾ stay ಗಳು ಬರುತ್ತಿದೆ, ಅದನ್ನು environmental aspect ನಲ್ಲಿ study ಆಗುತ್ತಿರುವುದರಿಂದ ಬಹಳ ಕಷ್ಟವಾಗಿದೆ. ನಿಮಗೆ ವಿಶೇಷವಾಗಿ ಒಂದು ಅಧಿಕಾರವನ್ನು ಚಲಾಯಿಸಿ ಕೊಡಲು ಅವಕಾಶವಿತ್ತು, ಅದನ್ನು ಕೊಟ್ಟ ಹಿನ್ನೆಲೆಯಲ್ಲಿ ಅಲ್ಲಿ ವಸ್ತುಸ್ಥಿತಿ ಏನಾಗಿತ್ತೆಂದರೆ ಅಲ್ಲಿರುವ ಮರಳಿನ river course ಬದಲಾಗಿದೆ. ಮೇಲುಗಡೆ ಸುಮಾರು 2–3 ಅಡಿ ಹೆಪ್ಪು ಮಣ್ಣು ಇರುತ್ತದೆ. ಅದನ್ನು ತೆಗೆಯುವುದಕ್ಕೆ ಅವಕಾಶವನ್ನೂ ಕೂಡಾ ಮಾಡಿದೆವು. ಆದರೆ ಮರಳು ಕೊರತೆ ಬರುತ್ತಿದೆ ಎಂಬ ಕಾರಣಕೋಸ್ಕರ ಮರಳನ್ನು ತೆಗೆಯುವುದಕ್ಕೆ ವ್ಯವಸ್ಥೆಯನ್ನು ಮಾಡಿ ಸಮಸ್ಯೆಯನ್ನು ಬಗೆಹರಿಸುವ ಕೆಲಸ ಮಾಡಿದ್ದೇವೆ. ಬೆಳಗಾವಿ ಸದನದಲ್ಲಿ ವಿಚಾರ ಪ್ರಸ್ತಾಪಕ್ಕೆ ಬಂದಾಗ, ಅದನ್ನು ಚರ್ಚೆ ಮಾಡಿ ತೀರ್ಮಾನ ಮಾಡಿದ್ದೇವೆ. ಇದೇ ರೀತಿ ಎಲ್ಲಾ ಕಡೆ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದೆ. ಆದರೆ ಸುಮಾರು 7 ಜಿಲ್ಲೆಗಳಲ್ಲಿ ಮರಳಿಲ್ಲ. ಮಾನ್ಯ ಜಗದೀಶ್ ಶೆಟ್ಟರ್ ರವರ ಜಿಲ್ಲೆಯಲ್ಲಿಯೂ ಮರಳಿಲ್ಲ, ಅವರಿಗೆ ಗದಗ್‌ನಿಂದ ಮರಳು ಬರುತ್ತದೆ ಹಾವೇರಿಯಲ್ಲಿಲ್ಲ, ತುಮಕೂರಿನಲ್ಲಿಯಂತೂ exhaust ಆಗಿದೆ. Exhaust ಆಗಿರುವ ಜಿಲ್ಲೆಯಲ್ಲಿ ನಮ್ಮದೂ ಒಂದು ಜಿಲ್ಲೆಯಾಗಿದೆ.

ಈಗ ಎಲ್ಲಾ stop ಮಾಡಿದ್ದೇವೆ. ಇದನ್ನು ಯಾವ ರೀತಿಯಾಗಿ ಮಾಡಬೇಕು? ಇದು demand and supply. ನಮ್ಮ demand ಎಷ್ಟಿದೆ? ನಾವು supply ಎಷ್ಟು ಮಾಡುತ್ತಿದ್ದೇವೆ? Suppose supply position ಚೆನ್ನಾಗಿದ್ದರೆ, ಈ ರೀತಿಯಾದ ಆರೋಪಗಳು ಬರುವುದಿಲ್ಲ. ಎಲ್ಲಿಯವರೆಗೆ supply ಜಾಸ್ತಿ ಮಾಡುವ ಕೆಲಸವನ್ನು ನಾವು ಮಾಡುವುದಿಲ್ಲವೋ ಅಲ್ಲಿಯವರೆಗೆ ಸಮಸ್ಯೆ ಪರಿಹಾರವಾಗುವುದಿಲ್ಲ. ಇದಕ್ಕಾಗಿ ನಾವೇನು ಮಾಡಿದೆವೆಂದರೆ, ಮೊನ್ನೆ 30 ಜನರು Deputy Commissioner ರವರನ್ನು ಕೂರಿಸಿ, ಅಧಿಕಾರಿಗಳು, ನಾನು ಮತ್ತು PWD minister ಎಲ್ಲರೂ ಮೂರು ದಿನಗಳ ಕಾಲ ಸತತವಾಗಿ ಕುಳಿತು case by case ಅನ್ನು study ಮಾಡಿ ಸ್ಥಳೀಯವಾಗಿ ಏನು ಸಮಸ್ಯೆ ಇದೆ, ಅದನ್ನು ಯಾವ ರೀತಿಯಾಗಿ ಬಗೆಹರಿಸಬಹುದು ಎಂಬುದನ್ನು ಚರ್ಚಿಸಿದ ಹಿನ್ನೆಲೆಯಲ್ಲಿ, ಸ್ವಲ್ಪಮಟ್ಟಿಗೆ ಪರಿಸ್ಥಿತಿ ಸುಧಾರಣೆಯಾಗುತ್ತಿದೆ. ನೀವು ಹೇಳುತ್ತಿರುವುದು ನಿಜ. ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಸುತ್ತಿರುವುದರಿಂದ ಪರಿಸರಕ್ಕೆ ಹಾನಿಯಾಗುತ್ತಿದೆ, ಅದು ಹಿಂದೆಯೂ ನಡೆದಿದೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಅದಕ್ಕೆ ಸರ್ಕಾರವೇನಾದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದೆಯೆ? ಎಂಬುದಕ್ಕೆ ಒಂದು ಉದಾಹರಣೆಯನ್ನು ನಾನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಅಭಿವೃದ್ಧಿ ಎನ್ನುವುದು ಕಟ್ಟಡಗಳನ್ನು ಕಟ್ಟುವ ಮೂಲ ನಾಗಾಲೋಟದಲ್ಲಿ ನಡೆಯುತ್ತಿದೆ, ಅಭಿವೃದ್ಧಿಯಾಗುತ್ತಿದೆ. ಕಾಮಗಾರಿಗಳು, PWD works ಮತ್ತು ಬೇರೆ ಬೇರೆ ಇಲಾಖೆಗಳ ಕಾಮಗಾರಿಗಳು ಯಥೇಚ್ಛವಾಗಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮರಳಿನ demand 23 ರಿಂದ 25 ದಶ ಲಕ್ಷ ಟನ್ ಇರುವ ಅಂದಾಜು ಇದೆ. ಈ demand ಪ್ರತಿ ವರ್ಷ 5 ರಿಂದ 10 percent increase ಆಗುತ್ತಲೇ ಇದೆ.

2008–09 ನೇ ಸಾಲಿಗೆ ಸಂಬಂಧಿಸಿದಂತೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. 2008–09 ನೇ ಸಾಲಿನಲ್ಲಿ ಮರಳು ಎಲ್ಲಾ ಕಡೆ ಹೇರಳವಾಗಿತ್ತು. ಆ ಸಮಯದಲ್ಲಿ 13.90 ಪರ್ಮಿಟ್ಸ್ ಕೊಟ್ಟಿರುತ್ತೇವೆ, ಇದರಿಂದ ರಾಜಧನ ಬಂದಿರುವಂತಹದು 4.17 ಕೋಟಿ ರೂ. ಗಳು. 2009–10ನೇ ಸಾಲಿನಲ್ಲಿ 15.30 ಪರ್ಮಿಟ್ issue ಆಗಿತ್ತು. ಇದರಿಂದ ವರಮಾನ

4.59 ಕೋಟಿ ರೂ. ಗಳು. 2010–11ನೇ ಸಾಲಿನಲ್ಲಿ 27 ಲಕ್ಷ ಟನ್ ಮರಳಿಗೆ ಪರವಾನಗಿಯನ್ನು ನೀಡಿದ್ದು, ಇದರಿಂದ 8 ಕೋಟಿ 10 ಲಕ್ಷ ರೂ. ಗಳ ವರಮಾನ ಬಂದಿರುತ್ತದೆ. 2011–12ನೇ ಸಾಲಿನಲ್ಲಿ 46 ಲಕ್ಷ ಪರ್ಮಿಟ್ಸ್ issue ಆಗಿರುತ್ತದೆ. ಇದರಿಂದ 14 ಕೋಟಿ ರೂ. ಗಳ ವರಮಾನ ಬಂದಿರುತ್ತದೆ. 2013–14ನೇ ಸಾಲಿಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಮಯದಲ್ಲಿ ನಾವು Mineral Concession Rules ಗೆ amendment ತಂದೆವು. NGT ಯವರು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತೀರ್ಪು ಕೊಟ್ಟಿರುವಂತ ಹಿನ್ನೆಲೆಯಲ್ಲಿ ಪರಿಸರದ clearance ಆಗಬೇಕೆನ್ನುವ ಉದ್ದೇಶದಿಂದ ಕಟ್ಟುನಿಟ್ಟಾಗ ಮಾಡಿ ನಿಲ್ಲಿಸಿದರು. ಹಾಗಾಗಿ 2013–14ನೇ ಸಾಲಿನಲ್ಲಿ 83.54 ಲಕ್ಷ ಟನ್‌ಗಳಿಗೆ ಪರ್ಮಿಟ್ ಕೊಟ್ಟಿರುತ್ತೇವೆ. ಇದರಿಂದ ನಮಗೆ ಬಂದ ವರಮಾನ 25.06 ಕೋಟಿ ರೂ. ಗಳು. 2014–15ಕ್ಕೆ ಇಲ್ಲಿಯವರೆಗೆ ಕೊಟ್ಟಿರುವುದು 31.28, 17.94 ಕೋಟಿ ರೂ.ಗಳ ವರಮಾನ ಬಂದಿರುತ್ತದೆ. NGT ಅವರು ಸ್ಟೇ ತಂದ ಕಾರಣದಿಂದ ಈ ವರ್ಷ ಕಡಿಮೆಯಾಗಿರುತ್ತದೆ. ಬಿಜಾಪುರದ ಒಂದು ಉದಾಹರಣೆ ಕೊಡುವುದಾದರೆ, ಬಗಲಿ ಎನ್ನುವವರು ನೇರವಾಗಿ ನನ್ನನ್ನೇ ಪಾರ್ಟಿ ಮಾಡಿ, ನಾವು ಕೊಟ್ಟಿದ್ದು ತಪ್ಪು ಎಂದು ಹೇಳಿ, ಎನ್.ಜಿ.ಟಿ. ಯಿಂದ ಅದಕ್ಕೆ stay ತಂದರು. ಆ ಒಂದು ಆಧಾರದ ಮೇಲೆ ಎಲ್ಲವೂ stop ಆಯಿತು. ಆ ಒಂದು ವಿಚಾರದ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಗಳನ್ನು ಕೊಟ್ಟರು. ಹೇಳಿಕೆಗಳನ್ನು ಕೊಟ್ಟ ನಂತರ ಲೋಕಾಯುಕ್ತದವರು ಬಿಗಿ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಈ ರೀತಿ ಮಾಡಿದ ನಂತರ ಬಹಳ ಕಡಿಮೆಯಾಗಿ, ಪರ್ಮಿಟ್ ಕೊಡುವುದಕ್ಕಾಗಲಿಲ್ಲ. ಮರಳಿನ ಕೃತಕ ಅಭಾವ ಜಾಸ್ತಿಯಾಯಿತು. ಕೃತಕವಾಗಿ ಮರಳನ್ನು ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಅಶೋಕ್ ರವರು ಮಾತನಾಡಿದರು. ಇದರಲ್ಲಿ ಕೇಸ್ ಹಾಕಿದ್ದೇವೆಯೇ ಅಥವಾ ಇಲ್ಲವೇ ಎನ್ನುವುದಕ್ಕೆ ಹೇಳುತ್ತೇನೆ, filter ಮರಳಿಗೆ ಸಂಬಂಧಿಸಿದಂತೆ 2012–13 ರಲ್ಲಿ ದಾಖಲಿಸಿದ FIR ಗಳು 245. 2013–14 ರಲ್ಲಿ 638 ಪ್ರಕರಣಗಳನ್ನು, 2014–15 ರಲ್ಲಿ ಸುಮಾರು 111 ಪ್ರಕರಣಗಳನ್ನು

ದಾಖಲು ಮಾಡಿದ್ದೇವೆ. ಒಟ್ಟಾರೆ ನಾವು ಅಧಿಕಾರಕ್ಕೆ ಬಂದ ಮೇಲೆ filter ಮರಳಿಗೆ ಸಂಬಂಧಿಸಿದಂತೆ 994 ಪ್ರಕರಣಗಳನ್ನು ದಾಖಲಿಸಿದ್ದೇವೆ.

ಶ್ರೀ ಆರ್.ಅಶೋಕ್:- ನಾನು filter ಮರಳಿನ ಮೇಲೆ ಕೇಸ್ ಹಾಕಿಲ್ಲ ಎಂದು ಹೇಳುತ್ತಿಲ್ಲ. ಪ್ರಕರಣವನ್ನು ಹಾಕಿದ್ದರೂ ಸಹ ಮಾರನೆಯ ದಿನವೇ ಅದೇ ಸ್ಥಳಕ್ಕೆ ಬಂದಿರುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ:- ನಾನು ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, suggestion ಒಂದನ್ನು ಕೊಡುತ್ತೇನೆ. ಅಬಕಾರಿ ಇಲಾಖೆಯವರು ಯಾರಾದರೂ liquor ಸಾಗಿಸುವಂತಹ ಸಂದರ್ಭದಲ್ಲಿ, ಆ ವಾಹನ ಒಂದು ವೇಳೆ seize ಆದರೆ ಆ ವಾಹನವನ್ನು ವಾಪಸ್ ಬಿಡುವುದೇ ಇಲ್ಲ. ಅದನ್ನು auction ಹಾಕುತ್ತಾರೆ. ಆ ರೀತಿ Act ಮಾಡಿದ್ದಾರೆ. ಆ Act ನ್ನು ತರಿಸಿಕೊಳ್ಳಿ. Filter ಮರಳಿಗೂ ಅನ್ವಯಿಸುವಂತೆ ತಿದ್ದುಪಡಿ ತಂದರೆ ಅದು seize ಆದಮೇಲೆ ಹರಾಜು ಹಾಕಬಹುದು. ಆಗ ಆ ಲಾರಿ ಆಚೆಯೇ ಬರುವುದಿಲ್ಲ.

ಶ್ರೀ ಕೆ.ಶಿವಮೂರ್ತಿ:- ರೈತರ ಟ್ರ್ಯಾಕ್ಟರ್ ಹಿಡಿದುಬಿಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ:- ನನ್ನ ಪ್ರಶ್ನೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅಶೋಕ್‌ರವರು ಸಾರಿಗೆ ಸಚಿವರಾದಾಗ ನಾನೂ ಸಹ ಆ ಜಾಗದಲ್ಲಿ ಕುಳಿತು ಬಹಳಷ್ಟು ಮಾತನಾಡಿದ್ದೆ. ಆದರೆ ನೀವು ಚೆನ್ನೈಗೆ ಹೋಗಿ ಬಂದು ಸ್ಟಡಿ ಮಾಡಿ . . . .

ಶ್ರೀ ಆರ್. ಅಶೋಕ್:- ನೀವು ಈ ಜಾಗದಲ್ಲಿ ಕುಳಿತುಕೊಂಡು ಬಂದಿರಿ. ನಾನು ಈಗ ಈ ಜಾಗಕ್ಕೆ ಬಂದಿದ್ದೇನೆ. ನನ್ನ ಜಾಗಕ್ಕೆ ನೀವು ಹೋಗಲಿಲ್ಲ. ಅವರ ಜಾಗಕ್ಕೆ ನಾನು ಬಂದಿದ್ದೇನೆ. ನನ್ನ ಜಾಗಕ್ಕೆ ಅವರು ಹೋಗಬೇಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಮರಳಿಗೆ ದಂಡ ಹಾಕುವುದರ ಬಗ್ಗೆ ಪರಿಸರ ಇಲಾಖೆಯವರು ಬಹಳ strict ಮಾಡಿದ್ದಾರೆ.

ಅಧ್ಯಕ್ಷರು:- ಹಾಗಾದರೆ ಅವರನ್ನೇ ಇರುವುದಕ್ಕೆ ಹೇಳಿ. ಬಾಕಿಯವರೆಲ್ಲಾ ಸತ್ತು ಹೋದರೆ ಆಯಿತು. ಮಾತೆತ್ತಿದರೆ ಪರಿಸರ, ಪರಿಸರ, ...

ಶ್ರೀ ಟಿ.ಬಿ. ಜಯಚಂದ್ರ:- ಮರಳಿಗೆ ದಂಡ ಹಾಕಿರುವ ಬಗ್ಗೆ ನಾನು ಬೇಗ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು:- Forest ಅಂದರೆ ಇವರ ಅಸಹಾಯಕತನ. ಪರಿಸರ, ಪರಿಸರ . . . . .

ಶ್ರೀ ಟಿ.ಬಿ. ಜಯಚಂದ್ರ:- ಅಸಹಾಯಕತನ ಅಲ್ಲ ಮಾನ್ಯ ಅಧ್ಯಕ್ಷರೆ. ಇವು ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಬಂದಿರುವ order ಗಳು. ನಾವು ಏನು ಮಾಡುವುದು ಹೇಳಿ? ಸುಪ್ರೀಂ ಕೋರ್ಟ್‌ನಲ್ಲಿ ಆದೇಶವಾಗದೆ. ಬೆಳಿಗ್ಗೆ ಎದ್ದರೆ ಲೋಕಾಯುಕ್ತರು . .. . ನಮ್ಮ ಲೋಕಾಯುಕ್ತರೊಬ್ಬರು ಧಾರವಾಡದಲ್ಲಿ ಕ್ಯಾಂಪ್ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಸುಪ್ರೀಂ ಕೋರ್ಟ್ under what provision….

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನೆಪ ಪ್ರಶ್ನೆ ಅಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಜಯಚಂದ್ರ ಅವರೇ, ನೀವು ಅಸಹಾಯಕರಾಗಬಾರದು. ಆ thickness ನೋಡಿಕೊಂಡು . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ನಾವು ನಿಸ್ಸಹಾಯಕರಾಗಿಲ್ಲವೆನ್ನುವ ಮಾತನ್ನು ಹೇಳುತ್ತೇನೆ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದು, ಅದನ್ನು ಯಾವ ರೀತಿ steamline ಮಾಡಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು:- ಅದನ್ನು Implement ಮಾಡುತ್ತೀರೋ, ಇಲ್ಲವೋ ಎಂದು ಹೇಳಿ.

ಡಾ. ಹೆಚ್.ಸಿ. ಮಹದೇವಪ್ಪ:- ಅವರು ಸಲಹೆ ಕೊಡುವ ಸಮಯದಲ್ಲಿ ಕೆಲವು ವಿಷಯಗಳನ್ನು ಸಹ ಹೇಳಿರುತ್ತಾರೆ. ಅಕ್ರಮ ಮರಳು ಎತ್ತಿದ್ದು, ದಂಡ ಹಾಕಿರುವುದರ ಬಗ್ಗೆ, 2013 ರಲ್ಲಿ ಕಾಯಿದೆ ಮಾಡಿದ್ದಾರೆಂದು ಹೇಳಿದರು. ಇದನ್ನು ನಿರ್ಬಂಧ ಮಾಡುವುದ್ಕಾಗಿಯೇ ಅದನ್ನು ಮಾಡಿದ್ದೆವು. ಅವರನ್ನು ಹಿಡಿದು ನಿರ್ಬಂಧವೇರಿ, ವಸೂಲು ಮಾಡಿ, ಕಾನೂನು ವ್ಯಾಪ್ತಿಯಲ್ಲಿ ತಂದು, ಕೊನೆಯೊಳಗೆ ಇದು organized mafia ಎಂದು ತಿಳಿದುಕೊಂಡು, ಗೂಂಡಾ ಕಾಯಿದೆ ಜಾರಿಗೆ ತಂದು, ಯುವ ಜನರು ಹಾಳಾಗಬಾರದೆಂದು ಮಾಡಿದೆವು. ಅಂತಿಮವಾಗಿ ನಮ್ಮ ಪರಿಸರ ಸಂರಕ್ಷಣೆಯಾಗಬೇಕು, ನದಿ ಪಾತ್ರ ಉಳಿಯಬೇಕು, ಬೆಳವಣಿಗೆಯಾಗಬೇಕು, ಮರಳು ಗ್ರಾಹಕರಿಗೆ ಅನುಕೂಲವಾಗಬೇಕೆಂಬ ಕಾಳಜಿಯನ್ನು ವ್ಯಕ್ತಪಡಿಸಿರುತ್ತಾರೆ. ಅದಕ್ಕಾಗಿಯೇ ಎಂ. ಸ್ಯಾಂಡ್ ಎನ್ನುವ ಕಲ್ಪನೆಯಿರಲಿಲ್ಲ. ನಮ್ಮಲ್ಲಿ 3 ದಶಲಕ್ಷ ಮಿಲಿಯನ್ ಟನ್ ಉತ್ಪಾದನೆ ಮಾಡಿ, ಇನ್ನೂ 52 point ಗಳನ್ನು ಗುರುತಿಸಿದ್ದೇವೆ. ಮಾನ್ಯ ಕಾನೂನು ಸಚಿವರು ಆ ಬಗ್ಗೆ ಹೇಳುತ್ತಾರೆ ಅಂತಿಮವಾಗಿ ನಾವು ಎಂ. ಸ್ಯಾಂಡ್‌ಗೆ ಹೆಚ್ಚು ಒತ್ತು ಕೊಟ್ಟು ಮಾಡಲಿಲ್ಲವೆಂದರೆ ತೊಂದರೆಯಾಗುತ್ತದೆ. In stream ನಲ್ಲೇ ಮೈನಿಂಗ್ ಮಾಡುವುದ್ಕಾಗುವುದು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಚಿವರೆ, ಕಳೆದ ಸಾರಿಯೂ manufactured sand ಬಗ್ಗೆಯೇ ಹೇಳಿದ್ದೀರಿ. ಕೇರಳದಲ್ಲಿ ಈಗ almost manufactured sand ಉಪಯೋಗಿಸುತ್ತಿರುವುದು. . . . ಇಲ್ಲೂ ಆ ರೀತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನಾನು ನಿಮಗೆ convince ಮಾಡುತ್ತೇನೆ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ:– ಜಗದೀಶ್ ಶೆಟ್ಟರ್ ಅವರೆ, ತಾವು ಕೆಲವು valuable suggestion ಕೊಟ್ಟಿದ್ದೀರಿ. I am very happy. You have given valuable suggestions.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Immediately ಇದಕ್ಕೆ ಎಷ್ಟು scope ಕೊಡುತ್ತೀರೋ ಅಷ್ಟು ಕೊಡಿ. ಕೇರಳದಲ್ಲಿ almost 70-80% manufactured sand ಉಪಯೋಗಿಸುತ್ತಿದ್ದಾರೆ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ:– ಹಿಂದೆ ಕಾನೂನು ಇರಲಿಲ್ಲದ ಕಾರಣ, ಎಷ್ಟು ಅಡಿಗೆ ಬೇಕಾದರೂ ಅಗೆದರು. ಒಂದು ಮೀಟರ್‌ಗೆ ಮೂರು ಅಡಿಗೆ ಹೊಡೆಯಬೇಕಾದರೂ 10–15 ಅಡಿಗಳಿಗೆ ಹೊಡೆದಿದ್ದಾರೆ. In stream ನಲ್ಲಿ ಮಾಡಬೇಕು ಎಂದರೆ ಅದಕ್ಕೆ environment ಅಡ್ಡ ಬರುತ್ತದೆ. ನೀರಾವರಿ ಮಂತ್ರಿಗಳು ನಮ್ಮ ಏರಿಯಾಗೆ ಬಂದು ಡ್ಯಾಮ್‌ನಲ್ಲಿ ಹೊಡೆಯಬಾರದೆಂದು ಹೇಳಿದರು. ವಿರೋಧ ಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿ ನಿಲ್ಲಿಸಿಯೆಂದು ನಾನೇ ಹೇಳಿದ್ದೆ. ಅವರು, ಇವರು ಮಾಡಿದರು ಎಂದು ಹೇಳುವುದಕ್ಕಿಂತ, ಈ ಮಾಫಿಯಾವನ್ನು ನಿಲ್ಲಿಸಬೇಕು. ಒಂದು ಕಾನೂನನ್ನು ಜಾರಿಗೆ ತಂದು, ಅದಕ್ಕೆ ನಿರ್ಬಂಧ ಹಾಕಿ ಮಾಫಿಯಾದವರನ್ನು ಗೂಂಡಾ ಕಾಯಿದೆ ವ್ಯಾಪ್ತಿಗೆ ತಂದು ಅದಕ್ಕೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆವು.

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ (ಮಂಗಳೂರು ನಗರ (ಉತ್ತರ)):– ಮರಳಿನ ಸಮಸ್ಯೆ ಪೂರ್ಣವಾಗಿ ಬಗೆಹರಿಯಬೇಕಾದರೆ, ನಮ್ಮ ಕರಾವಳಿ ತೀರದಲ್ಲಿ dredging ನಲ್ಲಿ ಪ್ರತಿ ವರ್ಷ ಮರಳನ್ನು ತೆಗೆದುಕೊಂಡು ಸಮುದ್ರದ

ಮಧ್ಯಕ್ಕೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಅದಕ್ಕಾಗಿ ಎಷ್ಟೋ ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಖರ್ಚು ಮಾಡುತ್ತಾರೆ. ಅದೇ ದುಡ್ಡನ್ನು ಬಳಸಿ ಒಂದು washing plant ಹಾಕಬೇಕು. ಈಗಾಗಲೇ ನಾವು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಇದರ ಬಗ್ಗೆ ಮಾತನಾಡಿದ್ದೇವೆ. ಇದು ಮಾಡಿದರೆ ಅತ್ಯುತ್ತಮವಾದ ಕ್ರಮದಿಂದ ಇಡೀ ರಾಜ್ಯಕ್ಕೆ ಬೇಕಾದಷ್ಟು ಮರಳು ನಮ್ಮಲ್ಲಿ ಸಿಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು:– Correct. ಸರ್ಕಾರದಿಂದ ಒಂದು washing plant ಹಾಕಿಸಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಎನ್ನತಕ್ಕಂಥದ್ದನ್ನು ನಾನು ನಿಮಗೆ ಹೇಳುತ್ತೇನೆ. ಆದರೆ, ತಾವು ನನಗೆ ಅವಕಾಶ ಕೊಡುತ್ತಿಲ್ಲ. 2013–14 ರಲ್ಲಿ 12 ಕೋಟಿ 65 ಲಕ್ಷ ರೂ. ಗಳ ದಂಡ ವಸೂಲಿ ಮಾಡಿದ್ದೇವೆ. ಆದರೆ, ಏನೂ ಕ್ರಮ ತೆಗೆದುಕೊಂಡಿಲ್ಲ ಎನ್ನುವಂಥ ಆರೋಪ ಬೇಡ.

ಅಧ್ಯಕ್ಷರು:– ತಾವು ಕ್ರಮ ತೆಗೆದುಕೊಂಡಿದ್ದೀರಿ ಎಂದು ತಿಳಿದುಕೊಳ್ಳೋಣ. ಈಗ ಇದನ್ನು ನಿಲ್ಲಿಸುವುದಕ್ಕೆ ಏನು ಕ್ರಮ ಮಾಡಬೇಕೆಂದು ಹೇಳಿ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ಅಭಾವವನ್ನು ನೀಗಿಸುವುದಕ್ಕೋಸ್ಕರ ನಮ್ಮಲ್ಲಿರತಕ್ಕಂಥ ಅವಕಾಶ ಏನೆಂದರೆ, ಸಾಕಷ್ಟು ಮರಳುಗಳು ಇರತಕ್ಕಂಥ blocks ಅನ್ನು identify ಮಾಡಬೇಕು. ನಾವು ಬೆಳಗಾವಿಯಲ್ಲಿ ಇದ್ದಾಗ, ಬಹಳ ಕಡಿಮೆ ಇತ್ತು. ಇಲ್ಲಿಯವರೆಗೆ 706 block ಗಳನ್ನು ನಾವು ಗುರುತಿಸಿದ್ದೇವೆ. ಅದರಲ್ಲಿ ಪರಿಸರ ಅನುಮೋದನೆ ಆಗಲೇಬೇಕು. ಇದು compulsory. ಅನುಮೋದನೆ ಆಗಿರತಕ್ಕಂಥದ್ದು ಕೇವಲ 460. ಇನ್ನೂ ಅನುಮೋದನೆ ಆಗಬೇಕಾಗಿರತಕ್ಕಂಥದ್ದು 343. ಅನುಮೋದನೆ ಆಗದೆ, ನಾವು ಏನೂ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿಗೆ ಹೋದರೆ ಲೋಕಾಯುಕ್ತ ಪೋಲೀಸರು ಬಂದು ಹಿಡಿದುಕೊಳ್ಳುತ್ತಾರೆ. 132 block ಗಳಲ್ಲಿ ಮಾತ್ರ ಗಣಿಗಾರಿಕೆ ಪ್ರಾರಂಭ ಮಾಡಲಾಗಿದೆ. ಅಲ್ಲೊಂದು,

ಇಲ್ಲೊಂದು ನಮ್ಮ ಹತ್ತಿರ ಮಾಡಿದ್ದಾರೆ. ಅದರಿಂದ ಪೂರೈಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಎಂ. ಸ್ಯಾಂಡ್ is the only way. ಇವತ್ತಿನ ದಿವಸ 3 ಲಕ್ಷ ಮೆಟ್ರಿಕ್ ಟನ್‌ನಷ್ಟು ಎಂ. ಸ್ಯಾಂಡ್ ಉತ್ಪಾದನೆ ಆಗುತ್ತಿದೆ.

ಅಧ್ಯಕ್ಷರು:- ಉತ್ಪಾದನೆ ಇನ್ನೂ ಜಾಸ್ತಿ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಈಗ ಒಂದು invitation ಬಂದಿದೆ. ಬೆಂಗಳೂರಿನ ಬಳಿ ಚಿಕ್ಕಾಬಳ್ಳಾಪುರದಲ್ಲಿ 18ನೇ ತಾರೀಖಿನಂದು ಪ್ರಾರಂಭ ಆಗುತ್ತಿದೆ. ಅಲ್ಲಿ ಒಂದು ಗಂಟೆಗೆ 300 ಮೆಟ್ರಿಕ್ ಟನ್‌ಗಳು ಉತ್ಪಾದನೆ ಬರುತ್ತದೆ. ಈ ರೀತಿಯಾಗಿ ವಿಶೇಷವಾಗಿ ಲೈಸೆನ್ಸ್ ಅನ್ನು ನಾವು ತುಮಕೂರು ಮತ್ತಿತರ ಕಡೆ ಕೊಡುತ್ತಿದ್ದೇವೆ, ಯಾರ‍್ಯಾರು ಎಂ. ಸ್ಯಾಂಡ್ ಅನ್ನು ಉತ್ಪಾದನೆ ಮಾಡುವುದಕ್ಕೆ ಬರುತ್ತಾರೆ, ಅವರಿಗೆ 50 ಎಕರೆಯವರೆಗೂ ಏರಿಯಾಗಳನ್ನು ಕೊಡಬೇಕೆಂದು ನಾವು ಒಂದು ನಿಯಮ ಮಾಡಿದ್ದೇವೆ.

ಶ್ರೀ ಜಗದೀಶ ಶೆಟ್ಟರ್:- 6 ತಿಂಗಳಿನಿಂದ discussion ಆಗುತ್ತಿದೆ. ಇಲ್ಲಿಯವರೆಗೆ ಎಷ್ಟು ಕೊಟ್ಟಿದೀರಿ?

ಶ್ರೀ ಎಸ್.ಟಿ. ಸೋಮಶೇಖರ್:- ಸಾಮಾನ್ಯ ಕಾರ್ಯಕರ್ತರಿಗೆ ಕೊಡುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಸಾಕಷ್ಟು ಜನ ಮುಂದೆ ಬರುತ್ತಿದ್ದಾರೆ. ಅವರು ನಮ್ಮಿಂದ ಏರಿಯಾಗಳನ್ನು ಪಡೆದ ಮೇಲೆ, ಅವರಿಗೆ machinery ಹಾಕಬೇಕಾಗುತ್ತದೆ. ಅದಕ್ಕೆ investment ಮಾಡಬೇಕಾಗುತ್ತದೆ.

ಶ್ರೀ ಜಗದೀಶ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಒಂದೂ ಆಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಆಗಿದೆ. ನಾನು ಆಗಲೇ ಹೇಳಿದ್ದೇನೆ. ಉದ್ಘಾಟನೆಗೆ ನಾನು ಮತ್ತು PWD Minister ಇಬ್ಬರೂ ಹೋಗುತ್ತಿದ್ದೇವೆ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ:– M sand ಗೆ ಟೆಂಡರ್ ಮಾಡಿದ್ದೇವೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಈಗ ಸಾಕಷ್ಟು ಜನ ಮುಂದೆ ಬರುತ್ತಿದ್ದಾರೆ. ಅದರ invest ಬಹಳ ಜಾಸ್ತಿ ಆಗುತ್ತದೆ. ಕನಿಷ್ಟವೆಂದರೂ ಸಹ 10 ರಿಂದ 30–40 ಕೋಟಿಗಳವರೆಗೆ ಆಗುತ್ತದೆ. ಇಷ್ಟು ಮೊತ್ತವನ್ನು invest ಮಾಡುವುದಕ್ಕೆ ಮುಂದೆ ಬಂದಿದ್ದಾರೆ.

ಅಧ್ಯಕ್ಷರು:– 10–20 ಕೋಟಿ ರೂಪಾಯಿಗಳಷ್ಟು ವೆಚ್ಚವಾಗುವುದಾದರೆ ಜಿಲ್ಲೆಗೊಂದರಂತೆ PWD ಯಿಂದ ಹಾಕಿ 100 ಕೋಟಿ ರೂಪಾಯಿ ಖರ್ಚು ಮಾಡಿ, ನಿಮಗೇನಾಗುತ್ತದೆ? ಮಾಡಿ ಬೇಗ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ:– ಮರಳಿಗೆ ಇದೊಂದೇ ಪರ್ಯಾಯವಾದ ದಾರಿ.

(ಗೊಂದಲ)

ಅಧ್ಯಕ್ಷರು:– ಕಥೆ ಹೇಳಬೇಡಿ.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ನಾವು ಮಾಡಿದ್ದೇವೆ. ಮೊದಲು ಒಂದು ಮೆಟ್ರಿಕ್ ಟನ್ ನಷ್ಟೂ ಉತ್ಪಾದನೆ ಆಗುತ್ತಿರಲಿಲ್ಲ. ನಾವು ಬಂದ ಮೇಲೆ ಮೂರು ಮೆಟ್ರಿಕ್ ಟನ್‌ನಷ್ಟು ಮಾಡುತ್ತಿದ್ದೇವೆ. ಈಗ supply ಆಗುತ್ತಿರುವುದೇ 8 ರಿಂದ 10 ದಶಲಕ್ಷ ಟನ್.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, 3 ಲಕ್ಷಕ್ಕೂ ಹೆಚ್ಚು ಮೆಟ್ರಿಕ್ ಟನ್‌ಗೆ ಈಗಾಗಲೇ installation ನಡೆಯುತ್ತಿದೆ. ಇದನ್ನು ಖಾಸಗಿ ವಲಯದಿಂದಲೇ ಮಾಡಬೇಕು. ಸರ್ಕಾರದಿಂದ ಮಾಡುತ್ತೇನ್ನುವುದು

ಕಷ್ಟವಾಗುತ್ತದೆ. ಅದಕ್ಕೋಸ್ಕರ M sand ವ್ಯಾಪಕವಾಗಿ ಬಂದಾಗ, ಬಹುಶಃ ಇದು ಒಂದು ವರ್ಷ ಅಥವಾ ಎರಡು ವರ್ಷ problem ಇರಬಹುದು, ನಾವು ಈಗಾಗಲೇ ನಮ್ಮ ಹತ್ತಿರ enquiry ಬರುತ್ತಿರುವುದನ್ನು ನೋಡಿದಾಗ . . . . .

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:- ಮಾನ್ಯ ಅಧ್ಯಕ್ಷರೆ, ಕರಾವಳಿ ತೀರದಲ್ಲಿ ದೊರೆಯುವ ಮರಳು washing plant ಹಾಕಿದರೆ ಉಪಯೋಗಕ್ಕೆ ಬರುತ್ತದೆ. ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕೆಂದು ಕೋರುತ್ತೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, M sand ನ ಜಾಸ್ತಿ ಯೂನಿಟ್‌ಗಳು ಎಲ್ಲಾ ಕಡೆಗೂ ಬರಬೇಕೆಂದು compulsory ಮಾಡಿದ್ದೇವೆ. ಆ area ಗಳನ್ನು ಗುರುತಿಸಿ local ನವರಿಗೆ promote ಮಾಡಿ, ಮಾಡಬೇಕೆಂದು ಇದ್ದೇವೆ. ಈಗ ಮೊಹಿಯುದ್ದೀನ್ ಬಾವಾರವರು ಹೇಳುತ್ತಿರುವ ವಿಚಾರವನ್ನು ಸಹ ಪ್ರಸ್ತಾಪ ಮಾಡಿದ್ದೇವೆ. Dredging ಮಾಡಿ ಆ ಮರಳನ್ನು ತೆಗೆಯುವುದಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾರೆ. ಆದರೆ, ಆ ಮರಳು ಉಪಯೋಗಕ್ಕೆ ಬರುತ್ತದೆಯೋ, ಇಲ್ಲವೋ ಎನ್ನುವ ಬಗ್ಗೆ ನಾವು ಒಂದು ಟೀಮ್ ಮಾಡಿ ಗೋವಾಕ್ಕೆ ಕಳುಹಿಸಿದ್ದೆವು. ಗೋವಾದಲ್ಲಿ ಈ ಕೆಲಸ ಮಾಡುತ್ತಿದ್ದಾರೆ ಎಂದು ಶಾಸಕರಾದ ಮಂಕಾಳವೈದ್ಯ ಇನ್ನಿತರರು ಬಂದು ಬಹಳಷ್ಟು impress ಮಾಡಿದರು. ಆಗ, ನಾವು ಗೋವಾಕ್ಕೆ ಟೀಮ್‌ನ್ನು ಕಳುಹಿಸಿದ್ದೆವು. ಅದು not a successful ಎನ್ನುವ ವರದಿ ಬಂತು. ಒಂದು ಬಾರಿ ತೆಗೆದ ಸಮುದ್ರದ ಮರಳು ಕಟ್ಟಡಗಳನ್ನು ಕಟ್ಟುವುದಕ್ಕೆ ಉಪಯೋಗವಾಗುವುದಿಲ್ಲ, ಅದನ್ನೇನಾದರೂ wash ಮಾಡುವುದಕ್ಕೆ ಸಾಧ್ಯವೇ ಅಥವಾ ಇನ್ನೇನಾದರೂ ಮಾಡುವುದಕ್ಕೆ ಸಾಧ್ಯವೇ, foreign ನಲ್ಲಿ ಎಲ್ಲಿಯಾದರೂ ಮಾಡುತ್ತಿದ್ದಾರೆಯೇ ನೋಡಿ ಎನ್ನುವ ಸಲಹೆಯನ್ನು ಸಹ ಕೊಟ್ಟಿದ್ದೆವು. Deputy Commissioner ರವರು ಗೋವಾ ಮತ್ತು ಇತರ ಕಡೆಗಳಿಗೆ ಹೋಗಿ ಮಹಾರಾಷ್ಟ್ರದಲ್ಲಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಅದನ್ನು ಸಹ ತರಿಸುತ್ತೇವೆ, ಇಲ್ಲಿಯವರೆಗೆ ನಮಗೆ ಬಂದಿರುವ ವರದಿ ಪ್ರಕಾರ ಅದು successful ಅಲ್ಲ. ಈಗ ಫಿಲ್ಟರ್ ಮರಳು ನೀವು ಕಟ್ಟಡಕ್ಕೆ ಉಪಯೋಗಿಸಿದರೆ ಯಾವುದೇ ಕಟ್ಟವೂ ಸಹ 20–25 ವರ್ಷಗಳ ಮೇಲೆ ಬಾಳಿಕೆ ಬರುವುದಕ್ಕೆ ಸಾಧ್ಯವಿಲ್ಲ. ನೋಡುವುದಕ್ಕಂತೂ ಗೊತ್ತೇ ಆಗುವುದಿಲ್ಲ. ನಿಮಗೆ ಒಳ್ಳೆ ಮರಳು ಮತ್ತು ನದಿ ತೀರದಿಂದ ಬರುವ ಮರಳು, ಫಿಲ್ಟರ್ ಮರಳನ್ನು ಮಿಕ್ಸ್ ಮಾಡಿಬಿಟ್ಟರೆ ಕಂಡು ಹಿಡಿಯುವುದಕ್ಕೆ ಸಾಧ್ಯವೇ ಇಲ್ಲ. ಈ ದಂಧೆ ನಿಲ್ಲಿಸಲು ನಾವು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಅದು ಏನೇ ಮಾಡಿದರೂ ಸಹ, ಕಣ್ಣುತಪ್ಪಿಸಿ ಈ ಕೆಲಸಗಳು ನಡೆಯುತ್ತಿವೆ. ಅದಕ್ಕೋಸ್ಕರವಾಗಿಯೇ ಕೇಸ್‌ಗಳನ್ನು ಹಾಕುತ್ತಿರುವುದು, fine collect ಮಾಡುತ್ತಿರುವುದು ಈ ಎಲ್ಲಾ ಕ್ರಮಗಳನ್ನು ನಾವು ಕೈಗೊಳ್ಳುತ್ತಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಆರ್. ಅಶೋಕ್:– ಲಾರಿ ಸೀಜ್ ಆದರೆ ಲಾರಿಯನ್ನು ಬಿಡಬಾರದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾವು ಎರಡು ಬಾರಿ ಕಟ್ಟುನಿಟ್ಟಾಗಿ ಜಾರಿ ಮಾಡುವುದಕ್ಕೆ ಹೋದಾಗ, ಲಾರಿಯವರು strike ಮಾಡಿದರು. ನೀವು ಇದ್ದಾಗಲೂ ಲಾರಿಯವರು strike ಮಾಡಿದರು. ನೀವು ಹೇಗೆ ಮಾಡಿದ್ದಿರೋ? ನಾವಂತೂ ಯಾವುದೇ ರೀತಿಯಲ್ಲಿಯೂ ಸಹ ಸಡಿಲ ಮಾಡುವುದಕ್ಕೆ ಹೋಗಿಲ್ಲ. ಕ್ರಿಮಿನಲ್ ಕೇಸ್ ಹಾಕುವುದು ಬೇಡ ಎನ್ನುವುದೊಂದನ್ನು ಬಿಟ್ಟರೆ ಬೇರೆ ಇನ್ನೇನೂ ಮಾಡಲಿಲ್ಲ. ಈಗ ನಮಗೆ ಮರಳು ಬರುತ್ತಿರುವುದು, real ಆಗಿ ಹೇಳಬೇಕೆಂದರೆ, ನಮಗೆ ಲೋಕಲ್ ಆಗಿ ಇಲ್ಲ. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿಯಲ್ಲಿ ಮಾತ್ರ ಲೋಕಲ್ ಅಗಿ ಸಿಗುತ್ತಿದೆ. ನಾವು ಯಾವ ರೀತಿಯಲ್ಲಿ ಬಾಗಲಕೋಟೆಯಲ್ಲಿ ಸಹಾಯವನ್ನು ಮಾಡಿದ್ದೇವೆಯೋ, ಅದೇ ರೀತಿ ನದಿ ತೀರದಲ್ಲಿರುವಂಥ ಮರಳನ್ನು ತೆಗೆಯುವುದಕ್ಕೆ, CRZ zone, non CRZ zone ಎನ್ನುವುದನ್ನು

ಮಾಡಿ, Deputy Commissioner ಗೆ ಹೇಳಿ non CRZ zone ನಲ್ಲಿಯೂ ಸಹ ಮರಳನ್ನು ಗಣಿಗಾರಿಕೆ ಮಾಡುವುದಕ್ಕೆ ಅವಕಾಶವನ್ನು ಕೂಡ ಮಾಡಿದ್ದೇವೆ. ಹಾಗಾಗಿ, ಇವತ್ತು ಆ ಜಿಲ್ಲೆಗಳಲ್ಲಿ ಸಮಸ್ಯೆ ನಿವಾರಣೆಯಾಗಿದೆ. ಅಲ್ಲಿಂದಲೇ ಬೆಂಗಳೂರಿಗೆ ಮರಳು ಬರುತ್ತಿದೆ. ಬಹುಶಃ ಇದಕ್ಕೆ M sand ಒಂದೇ ಪರ್ಯಾಯ, ಈಗಾಗಲೇ ಸಿಮೆಂಟ್ slag sand ಎಂಬುದೊಂದು ಇದೆ, ಸ್ಟೀಲ್ ಫ್ಯಾಕ್ಟರಿಗಳಲ್ಲಿ ಬರುವಂಥ slag ಬೇರೆಯಿದೆ. ಇದನ್ನು ಮರಳಾಗಿ ಉಪಯೋಗಿಸಬಹುದೆನ್ನುವುದಕ್ಕೆ ಈಗಾಗಲೇ ನಾವು ಟೆಸ್ಟ್ ಮಾಡಿಸಿದ್ದೇವೆ.

ಅಧ್ಯಕ್ಷರು:- ಈಗ ಪ್ರಶ್ನೆ ಇರುವುದು ಹೇಗೆ ನಿಯಂತ್ರಣವನ್ನು ಮಾಡುತ್ತೀರಿ ಎನ್ನುವುದು.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನಿಯಂತ್ರಣ ಮಾಡುತ್ತಿದ್ದೇವೆ. ಎಲ್ಲಾ ರೀತಿಯಿಂದ ಕಾನೂನು ಮಾಡಿದ್ದೇವೆ. ತಾಲ್ಲೂಕು ಕಮಿಟಿಗಳನ್ನು ಎಲ್ಲಾ ಕಡೆ ಮಾಡಿದ್ದೇವೆ. ಆದರೆ, ಇವತ್ತು ನಮಗೆ ಮರಳು ಸಿಗುತ್ತಿಲ್ಲ. Even now ತಮಿಳುನಾಡಿನಿಂದ ಬೆಂಗಳೂರಿಗೆ ಮರಳು ಬರುತ್ತಿದೆ.

(ಗೊಂದಲ)

ಅಧ್ಯಕ್ಷರು:- ಮರಳೇ ಸಿಗದೇ ಹೋದರೆ ಕಾನೂನು ಏಕೆ ಮಾಡುವುದಕ್ಕೆ ಹೋಗಿದ್ದೀರಿ ನೀವು?

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಪರಿಸರ ಇಲಾಖೆಯವರು ಒತ್ತಾಯ ಮಾಡಲೇಬೇಕಾಗುತ್ತದೆ. ಅದಕ್ಕೋಸ್ಕರ ಆ ರೀತಿ ನಿಯಂತ್ರಣ ಮಾಡಬೇಕಾಗುತ್ತದೆ. ನಾವು effort ಮಾಡಿ 706 vacant block ಗುರುತಿಸಿದ್ದೇವೆ. ಇದೊಂದು Hercules task ಆಗಿ ಮಾಡಿದ್ದೇವೆ. ಬಹುಶಃ ಈ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಎಲ್ಲಾ ಕ್ರಮವನ್ನು ಸಹ ನಾವು ತೆಗೆದುಕೊಳ್ಳುತ್ತಿದ್ದೇವೆ. ಅದರ ಬಗ್ಗೆ ಖಂಡಿತವಾಗಿ ನಮ್ಮ ಗಮನವಿದೆ. ಈ ಹಿನ್ನೆಲೆಯಲ್ಲಿ ನೀವು ಕೊಟ್ಟಿರುವಂಥ ಎಲ್ಲಾ ಸಲಹೆಗಳನ್ನು ಸ್ವೀಕರಿಸಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Royalty ಗಾಗಿ 4,000 ಕೋಟಿ ಬಜೆಟ್ ಇಟ್ಟುಕೊಂಡಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಆಂಧ್ರ ಮತ್ತು ಕರ್ನಾಟಕಕ್ಕಿರುವ ಒಂದೇ ವ್ಯತ್ಯಾಸವೆಂದರೆ ನಮ್ಮಲ್ಲಿ ನದಿ ತೀರಗಳು ಕಡಿಮೆಯಿದ್ದು ಅಲ್ಲಿ ಉದ್ದ ಇದೆ, ಇಲ್ಲಿಂದ ಹೋಗುವಂಥ ಮರಳೆಲ್ಲಾ ಅಲ್ಲೇ stock ಆಗಿರುತ್ತದೆ ಹಾಗಾಗಿ ಅವರಿಗೆ ಅವಕಾಶವಾಗುತ್ತಿದೆ.

(ಗೊಂದಲ)

ಅಧ್ಯಕ್ಷರು:– ಈಗ ಹದಿನಾಲ್ಕನೇ ವಿಧಾನಸಭೆಯ ಆರನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಕೊಡುತ್ತಿದ್ದೇನೆ.

11. ಹದಿನಾಲ್ಕನೇ ವಿಧಾನಸಭೆಯ ಆರನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹದಿನಾಲ್ಕನೇ ವಿಧಾನಸಭೆಯ ಆರನೇ ಅಧಿವೇಶನವು ದಿನಾಂಕ 02ನೇ ಫೆಬ್ರವರಿ 2015 ರಿಂದ 13.02.2015 ರವರೆಗೆ ಸಮಾವೇಶಗೊಂಡು ಒಟ್ಟು 10 ದಿನಗಳಲ್ಲಿ ಸುಮಾರು **52 ಗಂಟೆ 30** ನಿಮಿಷಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ದಿನಾಂಕ 02ನೇ ಫೆಬ್ರವರಿ, 2015ರ ಸೋಮವಾರದಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಪ್ರಸ್ತಾವದ ಮೇಲೆ 23 ಗಂಟೆ 31 ನಿಮಿಷಗಳ ಚರ್ಚೆಯಾಗಿದ್ದು, 26 ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ ಮತ್ತು ದಿನಾಂಕ: 13.02.2015 ರಂದು ಮಾನ್ಯ